# ಹಿಂದು ವಾಣಿ

विश्व हिन्दू परिषद
धर्मो रक्षति रक्षितः

ಸಂಪುಟ – 23
ಸಂಚಿಕೆ – 01
ಜ್ಯೇಷ್ಠ – ಆಷಾಢ
ಜುಲೈ 2024
ಬೆಲೆ ರೂ. 15.00

**HINDU VANI**
KANNADA MONTHLY

VOL - 23 ISSUE - 01 JULY 2024 BENGALURU PAGES-44 Rs:15/-



# ಗುರುಗಳ ಆಗಮನ – ಭಕ್ತಿ ಭರವಸೆಯ ನಿರ್ಮಾಣ



ಆನಂದ ಗುರೂಜಿ, ದೇವನಹಳ್ಳಿ


ಶ್ರೀ ನಾರಾಯಣಾನಂದ ಸರಸ್ವತಿ ಸ್ವಾಮಿ, ಜಯನಗರ


ಪೂಜ್ಯ ಡಾ. ಆರೂಢ ಭಾರತೀ ಸ್ವಾಮೀಜಿ
ರಾಮನಗರ ಜಿಲ್ಲೆಯ ಮೂರು ಹಾಡಿಗಳು


ರಾಮಕೃಷ್ಣ ಮಠ, ಹಲಸೂರು


ಶ್ರೀ ಷಡಕ್ಷರಿ ಬ್ರಹ್ಮ ಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಚಿತ್ತಾಪುರ, ಕಲ್ಬುರ್ಗಿ


ಶ್ರೀವಿದ್ಯೇಂದ್ರ ತೀರ್ಥ ಸ್ವಾಮೀಜಿ, ಚಿತ್ರಾಪುರ ಮಠ
ನಾಗೂರಿ, ಮಂಗಳೂರು


ಸ್ವಾಮಿ ಬೋಧಸ್ವರೂಪಾನಂದ ಹಾಗೂ ಸ್ವಾಮಿ ಅಮೃತಾನಂದ,
ಅಧ್ಯಕ್ಷರು, ರಾಮಕೃಷ್ಣ ಮಠ, ಹಲಸೂರು ಮತ್ತು ತಂಜಾವೂರು
ಎಮ್ ವಿ ಗಾರ್ಡನ್‌ನಲ್ಲಿ


ದಾವಣಗೆರೆ ಜಿಲ್ಲೆಯಲ್ಲಿ ಸಂತರ ಪಾದಯಾತ್ರೆ

# ಹಿಂದುವಾಣಿ

hinduvani@yahoo.com

ಶ್ರೀ ಕ್ರೋಧಿನಾಮ ಸಂವತ್ಸರ
ಜ್ಯೇಷ್ಠ – ಆಷಾಢ

ಜುಲೈ 2024

**ಗೌರವ ಸಂಪಾದಕ**

ಟಿ.ಎ.ಪಿ. ಶೆಣೈ

**ಪ್ರಕಾಶಕರು**

ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080-26604641

**ಪ್ರಸಾರ ಸಲಹೆ**

ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

**ಚಂದಾವಿವರ**

| | |
|---|---|
| ಬಿಡಿಪ್ರತಿ | ರೂ. 15/- |
| ವಾರ್ಷಿಕ ಚಂದಾ | ರೂ. 130/- |
| ದ್ವೈವಾರ್ಷಿಕ ಚಂದಾ | ರೂ. 250/- |

**ಮುದ್ರಕರು**

ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com


**ಸೂಕ್ತಿಶ್ರೀ**

# ಅರ್ಥವಾಗದ ಧರ್ಮಸೂಕ್ಷ್ಮ

– **ಬಿ.ಈ. ಸುರೇಶ,** ಬೆಂಗಳೂರು

**ಸೂಕ್ಷ್ಮೋ ಧರ್ಮೋ ಮಹಾರಾಜ ನಾಸ್ಯ ವಿದ್ಮೋ**
**ವಯಂ ಗತಿಮ್**
**ಪೂರ್ವೇಷಾಮಾನುಪೂರ್ವ್ಯೇಣ ಯಾತಂ**
**ವರ್ತ್ಮಾನುಯಾಮಹೇ ॥**

– **ಮಹಾಭಾರತ ಆದಿಪರ್ವ**

"ಮಹಾರಾಜಾ; ಧರ್ಮವು ಅತಿ ಸೂಕ್ಷ್ಮವಾದುದು. ಧರ್ಮಸೂಕ್ಷ್ಮವನ್ನು ಮತ್ತು ಧರ್ಮಮಾರ್ಗವು ಯಾವುದೆಂಬುದನ್ನು ನಾವು ಯಾರೂ ತಿಳಿಯಲಾರೆವು. ಮಹಾನುಭಾವರಾದ, ಮಹಾತ್ಮರಾದ ಮತ್ತು ಜ್ಞಾನಿಗಳಾದ ನಮ್ಮ ಹಿರಿಯರು ಯಾವ ಮಾರ್ಗವನ್ನು ಅನುಸರಿಸಿ ನಡೆದರೋ ಆ ಮಾರ್ಗವನ್ನೇ ಅನುಸರಿಸಿ ನಡೆಯುತ್ತಾ ನಾವೂ ಮುಂದೆ ಸಾಗುತ್ತಿದ್ದೇವೆ".

ಧರ್ಮವನ್ನೂ ಅಧರ್ಮವನ್ನೂ ಬೇರ್ಪಡಿಸಿ ತಿಳಿಯುವ ವಿವೇಕವು ಎಲ್ಲರಲ್ಲೂ ಇರದು. ತಿಳಿದವರು ಕೂಡಾ ಕೆಲವೊಮ್ಮೆ ಲೋಭಕ್ಕೋ ಅಥವಾ ಕ್ರೋಧಕ್ಕೋ ಬಲಿಯಾಗಿ ಧರ್ಮವನ್ನು ಬಿಟ್ಟು ಅಧರ್ಮವನ್ನು ಹಿಡಿಯಬಹುದು. ಹಾಗಿರುವಾಗ ತಿಳಿಯದವರಿಗೆ ಧರ್ಮವನ್ನು ಅರಿಯುವುದು ಅದೆಂತು ಸಾಧ್ಯ? ಆಚರಣೆಗೆ ಸಾಧುವಾದುದು ಯಾವುದು? ಅಥವಾ ಯಾವುದು ಅಲ್ಲ ಎನ್ನುವ ಸಂದೇಹಗಳು ಬಂದಾಗ; ಸದಾಚಾರ ಸಂಪನ್ನರಾದ ಹಿರಿಯರು ಅನುಸರಿಸುತ್ತಾ ಬಂದಿರುವ ಮಾರ್ಗವನ್ನೇ ನಾವು ಅನುಸರಿಸಿ ನಡೆಯುತ್ತೇವೆ. ದ್ರುಪದ ಮಹಾರಾಜನು ಯುಧಿಷ್ಠಿರನ ಬಳಿ ತನ್ನ ಸಂದೇಹವನ್ನು ಕುರಿತು

ಪ್ರಶ್ನಿಸಿದಾಗ ಧರ್ಮರಾಜನು ಅವನಿಗೆ ಹೇಳಿದ ಸಮಾಧಾನವಿದು. ಯುಧಿಷ್ಠಿರನಿಗೇನೇ ಅರಿವಾಗದ ಸಂದರ್ಭ ಬಂದಿರುವಾಗ; ಅಧರ್ಮವು ಧರ್ಮವೆಂದೂ ಧರ್ಮವು ಅಧರ್ಮವೆಂದೂ ವಿಪರೀತವಾಗಿ ಭಾಸವಾಗುವುದು ತಿಳಿದವರಿಂದಲೂ ನಡೆಯುತ್ತದೆ ಎಂದಾಯಿತು.

ಕಾಡಿನಲ್ಲೊಮ್ಮೆ ಮುನಿಯು ತಪಸ್ಸಿನಲ್ಲಿ ಮಗ್ನನಾಗಿದ್ದನು. ಆಗ ಅವನ ಮೇಲೊಂದು ಕಾಗೆಯು ಹಿಕ್ಕೆಯನ್ನು ವಿಸರ್ಜಿಸಿತು. ಸಿಟ್ಟಾದ ಮುನಿಯು ಕಾಗೆಯ ಕಡೆ ದುರುಗುಟ್ಟಿ ನೋಡಿದನು. ಅಷ್ಟರಿಂದಲೇ ಆ ಪಕ್ಷಿಯು ಸುಟ್ಟು ಕೆಳಗುರುಳಿತು. ಇದನ್ನು ನೋಡಿದ ಮುನಿಗೆ ತಾನು ನಿಗ್ರಹಾನುಗ್ರಹಕ್ಕೆ ಶಕ್ತನಾದ ಮಹಾತ್ಮನಾದೆ ಎನ್ನುವ ಅಹಂಕಾರವು ಬಂದಿತು.

ಇದೇ ಭಾವನೆಯಿಂದ ಹೊರಟ ಮುನಿಯು ಭಿಕ್ಷೆಯನ್ನು ಬೇಡುತ್ತಾ ಒಂದು ಮನೆಯ ಬಾಗಿಲಿಗೆ ಬಂದನು. ಮನೆಯಾಕೆಯು ಭಿಕ್ಷೆ ನೀಡಲು ಹೊರಟಳೇನೋ ಸರಿ; ಆ ಹೊತ್ತಿಗೆ ಸರಿಯಾಗಿ ಆಕೆಯ ಗಂಡನು ಕುಡಿಯಲು ನೀರು ಕೇಳಿದನು. ಆ ಹೆಣ್ಣು ಮಗಳು ಮೊದಲು ಗಂಡನು ಕೇಳಿದ ನೀರು ಕೊಡೋಣವೆಂದವಳು, ಅದನ್ನು ಕೊಟ್ಟು ಭಿಕ್ಷೆ ನೀಡಲು ಅವಸರದಿಂದ ಹೊರಟಳು. ಆಕೆಯು ಬರಲು ತಡವಾದಾಗ ಮುನಿಯು ರೋಷದಿಂದ ಆಕೆಯನ್ನು ದುರುಗುಟ್ಟಿ ನೋಡಿದನು.

ಅದನ್ನು ಗಮನಿಸಿದ ಆ ಯಜಮಾನಿಯು ನಸುನಗುತ್ತಾ ಆ ಮುನಿಯನ್ನು ಕುರಿತು "ದುರುಗುಟ್ಟಿ ನೋಡಿದರೆ ಸುಟ್ಟು ಹೋಗಲು ನಾನೇನು ಕಾಗೆಯೇ? ನಿನಗೆ ಧರ್ಮ ಸೂಕ್ಷ್ಮವೆಂದರೇನೆಂದು ಅರಿಯುವ ವಿವೇಕವಿಲ್ಲ. ಚಿತ್ತ ಶುದ್ಧಿಯಿಲ್ಲದ ನಿನ್ನಲ್ಲಿ ಅಹಂಭಾವವು ತುಂಬಿದೆ. ಧರ್ಮ ಸೂಕ್ಷ್ಮವನ್ನು ತಿಳಿದ ನನಗೆ ನಿನ್ನ ಕ್ರೂರ ದೃಷ್ಟಿಯು ಬಾಧಿಸಲಾರದು" ಎಂದಳು.

ಆಕೆಗಿದ್ದ ದಿವ್ಯದೃಷ್ಟಿಯನ್ನು ಅರಿತ ಮುನಿಯು ಆಶ್ಚರ್ಯದಿಂದ ಈ ಧರ್ಮ ಸೂಕ್ಷವನ್ನು ಅರಿಯುವ ದಾರಿಯಾವುದು ಎಂದು ಆಕೆಯನ್ನು ಪ್ರಾರ್ಥಿಸಿದನು, ಆಕೆಯು ನನ್ನ ಗುರುವಾದ ಧರ್ಮವ್ಯಾಧನ ಬಳಿ ಹೋಗು ಎಂದಳಂತೆ. ಆ ವ್ಯಾಧನು ಪ್ರಾಣಿಗಳನ್ನು ಕಡಿದು ಮಾಂಸವನ್ನು ಮಾರಿ ಬದುಕುವವನು! ಮುನಿಯು ತನ್ನ ಅಹಂಭಾವವನು ಮರೆತಾಗ; ಆ ವ್ಯಾಧನಿಂದಲೂ ಧರ್ಮಸೂಕ್ಷ್ಮವನ್ನು ಅರಿಯುವ ಮಾರ್ಗವನ್ನು ಅರಿತನು.

ತನ್ನ ಗಂಡನ ಸೇವೆಯೇ ಪ್ರಮುಖವೆಂದು ತಿಳಿದ ಒಬ್ಬ ಸಾಮಾನ್ಯ ಹೆಂಗಸಿಗೂ; ಪ್ರಾಣಿಗಳ ಮಾಂಸವನ್ನು ಮಾರುವ ಬೇಡನಿಗೂ ತಿಳಿದ ಧರ್ಮದ ಒಳಗನ್ನು ಅರಿಯುವ ಶಕ್ತಿಯು ತಪಸ್ಸು ಮಾಡುವ ಮುನಿಗೂ ಅರ್ಥವಾಗಿರಲಿಲ್ಲ.

ಧರ್ಮಸೂಕ್ಷ್ಮವು ತಿಳಿದ ಪಂಡಿತರಿಗೂ ತಿಳಿಯದ ಪಾಮರರಿಬ್ಬರಿಗೂ ಕೆಲವೊಮ್ಮೆ ಪ್ರಶ್ನೆಯಾಗಿಯೇ ಜಿಜ್ಞಾಸೆಯಾಗಿಯೇ ಉಳಿಯುತ್ತದೆ. ಧರ್ಮಾಚರಣೆಯನ್ನು ಅರಿತು, ಅಥವಾ ಕೇಳಿ, ಮತ್ತು ಹಿರಿಯರನ್ನು ಅನುಸರಿಸಿ ತಿಳಿಯುವ ಪ್ರಯತ್ನವನ್ನು ಮಾಡುತ್ತಲಿದ್ದರೆ; ಅಜ್ಞಾನವು ನಿವೃತ್ತಿಯಾಗುತ್ತದೆ. ಅಷ್ಟೇ ಅಲ್ಲದೆ ಶ್ರೇಯಸ್ಸು ಕೂಡಾ ಪ್ರಾಪ್ತಿಯಾಗುತ್ತದೆ.

■




## ಎಂದಿನಂತೆ


3 **ಸೂಕ್ತಿಶ್ರೀ**
ಅರ್ಥವಾಗದ ಧರ್ಮಸೂಕ್ಷ್ಮ

6 **ಪ್ರತಿಧ್ವನಿ**

7 **ಸಂಪಾದಕೀಯ**
ಯಜಮಾನಿಕೆ ಮತ್ತು ಜೀತಗಾರಿಕೆ

26 **ಕತೆಕತೆ ಕಾರಣ**
ಭಕ್ತಿಗೆ ಮೆಚ್ಚಿದ ದೇವರು

28 **ಕವನ**
ಸೋಮೇಶ್ವರ ಶತಕ

29 **ನಿಮಗೆಷ್ಟು ಗೊತ್ತು?**

30 **ಶಬ್ದಶೋಧ 199**

35 **ಕ್ಷೇತ್ರದರ್ಶನ**
ಉಚ್ಚಿಲ ಶ್ರೀ ಮಹಾಲಕ್ಷ್ಮೀ ಕ್ಷೇತ್ರ

38 **ಪ್ರಸ್ತುತ**
ಬಗೆಬಗೆ ವೇಷ


## ತಿಂಗಳ ವಿಶೇಷ


15 ರಾಷ್ಟ್ರ–ಧರ್ಮ–ಜಾಗೃತಿಗೆ ವಕೀಲರ ಮುನ್ನುಡಿ

18 ಬಿತ್ತಿದಂತೆ ಬೆಳೆ

20 ವಿಶೇಷ ವಿವಾಹ ಕಾಯಿದೆ


21 ಅಮೆರಿಕದಲ್ಲಿ ವಿವೇಕಾನಂದರ ಮೊದಲ ಭಾಷಣ

23 ಅಷ್ಟಾವಕ್ರ

32 ಮತ್ತೆ ದತ್ತಯಾತ್ರೆ

33 ಮಂಗಳೂರು–ಸೇವಾ ವಿಭಾಗದ ಟ್ರೆಂಡ್‌ಸೆಟ್ಟರ್

34 ಹೆಸರಿನೊಂದಿಗೆ ಸಂಸ್ಕೃತಿ




## ಚುನಾವಣೆಯೇ ಅಂತಿಮವಲ್ಲ

ಚುನಾವಣೆಯು ಪ್ರಜಾಪ್ರಭುತ್ವದ ಪ್ರಮುಖ ಘಟ್ಟವೆನ್ನುವುದೇನೋ ನಿಜವೆ. ಆದರೆ ಅದುವೇ ಅಂತಿಮವೇನಲ್ಲ. ಹಾಗಿದ್ದಿದ್ದರೆ ಕೋಟ್ಯಾದಿ ಕಾರ್ಯಕರ್ತರಿಗೆ ಮುಂದಿನ 5 ವರ್ಷ ಯಾವುದೇ ಕೆಲಸ ಕಾರ್ಯಗಳಿಲ್ಲವೇ? ಹಾಗೆ ನೋಡಿದರೆ ಈ ಕಾಲಾವಧಿಯಲ್ಲಿ ತಾವು ಮತದಾರರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದರ ಕಡೆಗೆ ಗಮನ ಹರಿಸಬೇಕಾಗಿದೆ. ತಮ್ಮ ಪಕ್ಷದ ತಾತ್ವಿಕ ಚಿಂತನೆಯನ್ನು ದೃಢಗೊಳಿಸುವುದು ಇನ್ನೀಗ ಆಗಬೇಕು.

– **ಪ್ರಭಾಕರ ರಾವ್,** ಪೆರ್ಡೂರು

## ಮಹಾಭಾರತ ಮತ್ತು ರಾಜನೀತಿ

ಕಳೆದ ಸಂಚಿಕೆಯ ಸಂಪಾದಕೀಯವು ವಿಶೇಷವಾದುದು. ಎರೆಡೆರಡು ಸಾರಿ ಓದಿ ಮನನ ಮಾಡಬೇಕಾದ ಉತ್ತಮ ಬರಹ. ಅದೇ ರೀತಿ ಶಾಂತಿ ಪರ್ವದ ಭೀಷ್ಮೋಪದೇಶವು ಕೂಡಾ ಓದುತ್ತಿದ್ದಂತೆ ಅದನ್ನು ಮೂಲದಲ್ಲೇ ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ. ಪ್ರತಿ ತಿಂಗಳೂ ಇಂತಹ ಮೂಲಕಾವ್ಯಗಳ ಕೆಲವು ಶ್ಲೋಕಗಳನ್ನು ಆರಿಸಿಕೊಟ್ಟು ಉಪಕರಿಸುವಿರಾ.

– **ರವಿಪ್ರಕಾಶ್,** ಬೆಂಗಳೂರು

## ತುರ್ತು ಪರಿಸ್ಥಿತಿ

1975 ರಿಂದ 1977ರ ಅವಧಿಯು ಆ ಕಾಲದಲ್ಲಿ ಸಕ್ರಿಯರಾಗಿದ್ದ ನಾಗರಿಕರು ತಮ್ಮ ಜೀವಿತಾವಧಿಯಲ್ಲಿ ಕಂಡ ಅತ್ಯಂತ ಕರಾಳ ದಿನಗಳು. ಉಸಿರೆತ್ತುವುದು ಮಿಸುಕಾಡುವುದನ್ನು ಗಮನಿಸುತ್ತಿದ್ದ ಸರ್ಕಾರ. ಸ್ವಾರ್ಥ ರಾಜಕೀಯವು ಕುಟುಂಬ ರಾಜಕಾರಣದೊಂದಿಗೆ ಸೇರಿ ಅದೆಷ್ಟು ಕ್ರೂರವಾಗಬಹುದೆನ್ನುವುದನ್ನೂ ಊಹಿಸಲು ಅಸಾಧ್ಯವಾಗುವಷ್ಟು ಭಯಾನಕವಾಗ ಬಹುದೆನ್ನುವುದನ್ನೂ ಅನುಭವಿಸಿದ ದಿನಗಳು. ಭೂಗತ ಪತ್ರಿಕೆಗಳ ತುಣುಕುಗಳನ್ನು ನೀಡಿ ಆ ದಿನಗಳನ್ನು ಕಣ್ಣೆದುರು ತಂದ ಹಿಂದುವಾಣಿಗೆ ಧನ್ಯವಾದಗಳು.

– **ಪಿ.ಆರ್. ವೆಂಕಟನಾರಾಯಣ,** ಹೊಸೂರು

# ಯಜಮಾನಿಕೆ ಮತ್ತು ಸಾಂಸ್ಕೃತಿಕ ಜೀತಗಾರಿಕೆ

ಭಾಷೆ, ಸಾಹಿತ್ಯ ಮತ್ತು ಕಲಾ ವಿಭಾಗಗಳ ಆಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಕಾಂಗ್ರೆಸ್ ಕಚೇರಿಗೆ ಕರೆಸಿ ಸಭೆ ನಡೆಸಿದ ಕಾಂಗ್ರೆಸ್ ಅಧ್ಯಕ್ಷರ ನಡೆಯು ಅಧಿಕಾರದ ಅಹಂಕಾರದಿಂದ ಪ್ರೇರಿತವಾದುದು ಎನ್ನುವುದರಲ್ಲಿ ಆಶ್ಚರ್ಯವೇನಿಲ್ಲ. ತುರ್ತು ಪರಿಸ್ಥಿತಿಯನ್ನು ಹೇರಿದ ಆಗಿನ ಇದೇ ಪಕ್ಷದ ಪ್ರಧಾನಿಯು ಅಕ್ಷರಶಃ ಸರ್ವಾಧಿಕಾರಿಯಾಗಿ ದೇಶವನ್ನು ಆಳಿದ ನೆನಪು ಇನ್ನೂ ಅಳಿಸಿ ಹೋಗಿಲ್ಲ.

ಆದರೆ ಸಾಹಿತಿ, ಕಲಾವಿದರು ಎನಿಸಿಕೊಂಡವರು ಬಾಲ ಮಡಚಿಕೊಂಡವರಂತೆ ಹಲ್ಲುಗಿಂಜಿಕೊಂಡು ಆ ಸಭೆಗೆ ಹೋದುದು ಮಾತ್ರ ಆಶ್ಚರ್ಯವೆನಿಸುತ್ತದೆ. ಜಲಿಯಾನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ತಮ್ಮ ಸರ್ ಪ್ರಶಸ್ತಿಯನ್ನು ಹಿಂದಿರುಗಿಸಿದ ರವೀಂದ್ರನಾಥ ಟಾಗೋರರು, ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿ ಕೊಟ್ಟ ಶಿವರಾಮ ಕಾರಂತರು, ಸೆರೆಮನೆಗೆ ಹೋಗಲು ಸಿದ್ಧರಾಗಿದ್ದ ಮರಾಠಿ ಸಾಹಿತಿ ದುರ್ಗಾ ಭಾಗವತರನ್ನು ದೇಶದ ಬರೆಹಗಾರರು ಅಷ್ಟು ಬೇಗ ಮರೆತುದುದು ಮಾತ್ರ ವಿಸ್ಮಯ. ಗೋಪಾಲಕೃಷ್ಣ ಅಡಿಗರ ಕವನವೊಂದು ಅಶ್ಲೀಲವೆಂದು ದೂರು ಬಂದಿತ್ತು. ಆಗಿನ ಮುಖ್ಯಮಂತ್ರಿಗಳು ಆ ಬಗ್ಗೆ ಸಮಜಾಯಿಸಿ ಕೇಳಲು ತಮ್ಮ ಬಿಡುವಿನಲ್ಲಿ ಅಡಿಗರನ್ನು ಕರೆಯುವೆವೆಂದು ಅವರಿಗೆ ಪತ್ರ ಬರೆದರು. ಅದಕ್ಕೆ ಅಡಿಗರು ಪತ್ರ ಬರೆದು ನನಗೂ ಬಿಡುವಿರುವಾಗ ಮಾತ್ರವೇ ತಮ್ಮನ್ನು ಕಾಣಬಲ್ಲೆ ಎಂದು ಉತ್ತರಿಸಿದ್ದರು. ಆದರೆ ಬೆನ್ನ ಹುರಿಯು ನೇರವಿಲ್ಲದ ಬರೆಹಗಾರರು ಬಹಳಷ್ಟು ಮಂದಿ ಆ ನಂತರದ ಕಾಲದಲ್ಲಿ ಬಂದು ಹೋದರು. ಒಬ್ಬ ಜ್ಞಾನಪೀಠ ಪ್ರಶಸ್ತಿ ವಿಜೇತರು ತಾವು ಮತ್ತು ತಮ್ಮ ಕುಟುಂಬದವರು ಕಾಂಗ್ರೆಸ್ಸಿನ ನಮ್ರ ಅನುಯಾಯಿಗಳೆಂದು ಹೇಳಿಕೊಂಡಿದ್ದರು. ಅಂಥವರು ತುರ್ತು ಪರಿಸ್ಥಿತಿಯ ಕಾಲದಲ್ಲಿ ನವದ್ವಾರಗಳನ್ನು ಮುಚ್ಚಿಕೊಂಡು ಆಗಿನ ಸರ್ವಾಧಿಕಾರಿಗೆ ಸಲಾಮು ಮಾಡಿ 'ಕಾಲಿಗೆ ನಮಸ್ಕಾರ ಮಹಾಕಾಲಿಗೆ ನಮಸ್ಕಾರ' ಕವನಕ್ಕೆ ಯೋಗ್ಯರಾಗಿ ಬಾಳಿದ ವಿಧೇಯತೆಯ ಗಡಿಯನ್ನು ಮೀರಿ; ಅಧಿಕಾರ, ಹುದ್ದೆ ಅದರೊಂದಿಗೆ ಬರುವ ಟಿ. ಎ. ಡಿ. ಎ. ಗಳ ದಾಸರಾದರು.

ಇನ್ನು 'ಹೌದು ನಾನೇ ಕರೆದಿದ್ದೆ'. ಅವರೆಲ್ಲ ರಾಜಕೀಯ ವ್ಯಕ್ತಿಗಳೇ. ಅಕಾಡೆಮಿಗೆ ನೇಮಕಗೊಂಡವರು ರಾಜಕೀಯಕ್ಕೆ ಪ್ರವೇಶಿಸುವ ಮೊದಲ ತರಬೇತಿಯನ್ನು ಪಡೆಯುವರು ಎನ್ನುವ ದುರಹಂಕಾರದ ಮಾತು ಕೂಡಾ ಕಾಂಗ್ರೆಸ್ ಅಧ್ಯಕ್ಷರಿಂದ ಬಂದಿತು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಡಿ. ಕೆ ಬರೂವಾ ಎನ್ನುವ ವ್ಯಕ್ತಿಯೊಬ್ಬರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಆಗಿನ ಸರ್ವಾಧಿಕಾರಿಯನ್ನು ಹೊಗಳುವ ಭರದಲ್ಲಿ ಅವರು ಇಂದಿರಾ ಈಸ್ ಇಂಡಿಯಾ, ಇಂದಿರಾ ಈಸ್ ಇಂಡಿಯಾ ಎಂದು ದೇಶವನ್ನು ಆಕೆಯೊಂದಿಗೆ ಸಮೀಕರಿಸಿದ್ದರು. ಆಕೆಯ ಮಗನಾಗಿದ್ದ ಎಂಬ ಕಾರಣಕ್ಕೆ ಆ ತರುಣನು ಮಂತ್ರಿ ಮಂಡಲದ ಹಿರಿಯರನ್ನು ಸರ್ಕಸಿನ ಕೋತಿಗಳಂತೆ ಕುಣಿಸುತ್ತಿದ್ದನು. ಆತನೇನೋ ಕುಣಿಸುತ್ತಿದ್ದುದು

ಸರಿ. ಆದರೆ ರಾಜಕೀಯದಲ್ಲಿ ಐದಾರು ದಶಕಗಳನ್ನು ಕಳೆದ ಈ ನಾಯಕರು ಅವನ ಮುಂದೆ ಲಾಗಹೊಡೆಯುತ್ತಿದ್ದರು.

ಅದೇ ಡಿ.ಕೆ. ಬರೂವಾ ಆ ಎಳೆಸು ಸಂಜಯಗಾಂಧಿಯನ್ನು ವರ್ಣಿಸಿದುದೂ ಕೂಡಾ ಈಗ ದಾಖಲೆಯಾಗಿದೆ. "ಸಂಜಯಗಾಂಧಿ ಭಾರತದ ಭವಿಷ್ಯವಾಗಿರುವರು. ಅವರ ವಯಸ್ಸು ಕಡಿಮೆಯಾದರೇನಂತೆ? ಅವರು ಯಾವುದೇ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಸಮರ್ಥನಾದ ತರುಣ. ಚಕ್ರವರ್ತಿ ಅಕ್ಬರನು 18ನೇ ವಯಸ್ಸಿನಲ್ಲಿ ಚಕ್ರವರ್ತಿಯಾಗಿರಲಿಲ್ಲವೇ? ರಣಜಿತ ಸಿಂಹನು 22ನೇ ವಯಸ್ಸಿನಲ್ಲಿ ಸಮರ್ಥ ಮಹಾರಾಜನಾಗಿ ಬಿಟ್ಟಿದ್ದ. ಆಚಾರ್ಯ ಶಂಕರರು 30ನೇ ವಯಸ್ಸಿನೊಳಗೆ ವಿವೇಕಾನಂದರು 39ರ ವಯಸ್ಸಿನೊಳಗೆ ತಮ್ಮ ಅತ್ಯುನ್ನತಿಯನ್ನು ಪಡೆದಿದ್ದರು" ಎಂದು ಹೇಳಿ ವಂದಿಮಾಗದರ ದಾಖಲೆಗಳನ್ನು ಮುರಿದು ಬಿಟ್ಟಿದ್ದರು.

ಹಾಗೆಂದು ಸರ್ವಾಧಿಕಾರದ ದಾರ್ಷ್ಟ್ಯವನ್ನು ಎದುರಿಸಿ ನೇರನಿಂತ ಸ್ವಾಭಿಮಾನಿಗಳೂ ಇದ್ದರು. ಹೆಸರಾಂತ ಹಿನ್ನೆಲೆ ಗಾಯಕ ಕಿಶೋರ ಕುಮಾರರನ್ನು ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಬಂದು ಹಾಡಲು ತಾಕೀತು ಮಾಡಿದ್ದರು. ಆದರೆ ಆತ ಅದನ್ನು ಒಪ್ಪಲಿಲ್ಲ. ನಂತರ ಅವರ ಗೀತೆಗಳನ್ನು ಆಕಾಶವಾಣಿಯಲ್ಲೂ ಉಳಿದ ಸಭೆ ಸಮಾರಂಭಗಳಲ್ಲೂ ಹಾಡಲು ನಿಷೇಧಿಸಲಾಯಿತು. ಕಿಶೋರ ಕುಮಾರರನ್ನು ಯಾವುದೇ ಸಭೆ ಸಮಾರಂಭಗಳಿಂದ ಬಹಿಷ್ಕರಿಸಲಾಯಿತು. ಆದರೆ ಆತ ಸರ್ಕಾರದ ಎಲ್ಲಾ ಕ್ರಮಗಳಿಗೆ ಬಗ್ಗಲಿಲ್ಲ. ಪ್ರಲೋಭನೆಗಳಿಗೆ ತಲೆಬಾಗದ ಒಂದು ತಲೆಮಾರನ್ನು ನಾವು ತುರ್ತುಪರಿಸ್ಥಿತಿಯ ಆ ಎರಡು ವರ್ಷಗಳಲ್ಲಿ ಕಂಡೆವು ಕೇಳಿದೆವು. ಸೆನ್ಸಾರ್ ಮಂಡಳಿಯು ಗುರುತಿಸಿದ ಅಕ್ರಮವೆನ್ನುವ ಬರಹಗಳ ಜಾಗವನ್ನು ಕಪ್ಪು ಬಣ್ಣದಿಂದ ತುಂಬಿ ಖಾಲಿಬಿಟ್ಟ ಸಂಪಾದಕರಿದ್ದರು. ತಮ್ಮ ಮುದ್ರಣಾಲಯಗಳನ್ನು ಮುಚ್ಚಿದುದಷ್ಟೇ ಅಲ್ಲ ಸೆರೆಮನೆ ಸೇರಿದ ಸಾವಿರಾರು ಸ್ವಾತಂತ್ರ್ಯ ಪ್ರೇಮಿ ಮಹನೀಯರಿದ್ದರು.

'ಸಾಹಿತಿಗಳನ್ನು ನಾನೇ ಕರೆಸಿದ್ದೆ. ಅದರಲ್ಲಿ ತಪ್ಪೇನು'?. ಅಕಾಡೆಮಿಗಳೇನು ಸ್ವಾಯತ್ತ ಸಂಸ್ಥೆಗಳಲ್ಲ' ಎನ್ನುವ ದುರಹಂಕಾರದ ಮಾತುಗಳನ್ನು ಕೇಳಿದ ಮೇಲೂ ಈ ಅಕಾಡೆಮಿಗಳ ಅಧ್ಯಕ್ಷರಾಗಲೀ ಸದಸ್ಯರಾಗಲೀ ಅದನ್ನು ವಿರೋಧಿಸಿ ರಾಜಿನಾಮೆಯನ್ನು ನೀಡುವುದು ಬಿಡಿ, ಯಾರೊಬ್ಬರು ಅವರ ಮಾತನ್ನೂ ಪ್ರತಿಭಟಿಸುವ ಗೋಜಿಗೆ ಹೋಗಲಿಲ್ಲ. ರಾಜರ ವಿರುದ್ಧ ಇಂಗ್ಲೆಂಡಿನ ಕಾಮನ್ಸ್ ಸಭೆಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ಅದನ್ನು ಅಲ್ಲಗಳೆಯುವಂತೆ ಸಭೆಯ ಸ್ಪೀಕರ್ ಮೇಲೆ ಒತ್ತಡವನ್ನು ರಾಜನ ಪಕ್ಷದವರು ಹೇರಿದರು. ಅಲ್ಲಿ ನಡೆದ ನಡಾವಳಿಗಳ ವಿರುದ್ಧ ಹೇಳಿಕೆಯನ್ನು ನೀಡದಿದ್ದಲ್ಲಿ ಆತನನ್ನು ಸೆರೆಮನೆಗೆ ದೂಡಲಾಗುವುದು ಎಂದು ಬೆದರಿಸಿದರು. ಅದಕ್ಕೆ ಉತ್ತರಿಸಿದ ಆ ಸ್ಪೀಕರ್ "ಈ ಸಭೆಯಲ್ಲಿ ಭಾಗವಹಿಸಿದ ಸದಸ್ಯರ ಮಾತುಗಳು ಮಾತ್ರ ನನ್ನ ಕಿವಿಗಳಿಗೆ ಬಿದ್ದಿದೆ. ನೀವೀಗ ಹೇಳುತ್ತಿರುವುದಾಗಲೀ, ಒತ್ತಾಯಿಸುತ್ತಿರುವುದಾಗಲೀ ನನಗೆ ಕೇಳಿಸುತ್ತಲೇ ಇಲ್ಲ" ಎಂದು ಆ ಸ್ಪೀಕರ್ ಹೇಳಿದನಂತೆ.

ಕಳೆದ 49ವರ್ಷಗಳ ಹಿಂದೆ ಇದೇ ತಿಂಗಳು ಈ ದೇಶದಲ್ಲಿ ನಡೆದ ಕರಾಳ ಸಂಗತಿಯ ನೋವನ್ನು ಕಣ್ಣಾರೆ ಕಂಡುದರಿಂದ, ಅನುಭವಿಸಿದುದರಿಂದ ಇಷ್ಟೆಲ್ಲವನ್ನು ಬರೆಯಬೇಕಾಯಿತು.

■

# ಬಾಲಗಂಗಾಧರ ತಿಲಕ
## ಲೋಕಮಾನ್ಯವಾಯಿತು ಸ್ವಾತಂತ್ರ್ಯ ಮತ್ತು ಸಮಾಜ ಸುಧಾರಣೆ

– ಟಿ.ಎ.ಪಿ. ಶೆಣೈ



ಲಾಲ್ ಬಾಲ್ ಮತ್ತು ಪಾಲ್

ಲೋಕಮಾನ್ಯ ಬಾಲಗಂಗಾಧರ ತಿಲಕರ ನೇತೃತ್ವವು ಭಾರತದ ಸಮಾಜೋರಾಜಕೀಯ ಮಂಥನದ ಕಾಲ. ಕ್ರೈಸ್ತ ಮಿಷನರಿಗಳ ಪ್ರಾಬಲ್ಯವನ್ನು ಮಣಿಸುವ ಹತ್ತು ಹಲವು ಮಾರ್ಗಗಳನ್ನು ಭಾರತದ ಆಂತರ್ಯವು ಅನ್ವೇಷಿಸುತ್ತಿದ್ದ ಕಾಲದ ಪ್ರಾರಂಭ. ಮಹರ್ಷಿ ದಯಾನಂದ ಸರಸ್ವತಿಯವರಿಂದ ಮೊದಲುಗೊಂಡ ಸನಾತನತೆಯಿಂದ ರಾಜಾರಾಮ ಮೋಹನ ರಾಯ್‌ರ ನವೀನ ಮಾರ್ಗದ ಪ್ರಯತ್ನವು ಪರಿಣಾಮಕಾರಿಯಾಗುತ್ತಿದ್ದ ಸಮಯ. ರಾಷ್ಟ್ರೀಯ ಜಾಗೃತಿಯು ಮೊದಲೋ ಅಥವಾ ಸಾಮಾಜಿಕ ಸುಧಾರಣೆಯೋ ಎನ್ನುವ ದ್ವಂದ್ವಕ್ಕೆ ಪರಿಹಾರ ದೊರಕಿದ ಕಾಲ. ಯಾವುದಕ್ಕೆ ಪ್ರಾಶಸ್ತ್ಯ! ಗೋಖಲೆಯವರ ಚಿಂತನೆಗೋ? ಅಥವಾ ತಿಲಕರ ಮಾರ್ಗಕ್ಕೋ? ಟಾಗೋರರ ನಿಲುವಿಗೋ ಅಥವಾ ಮುಂದೆ ಬಂದ ಗಾಂಧೀಜಿಯವರ ರೀತಿಗೋ? ಎನ್ನುತ್ತಿರುವಾಗ; ಚರ್ಚೆ ಮತ್ತು ಸಂವಾದವನ್ನೇ ಸಾಮೂಹಿಕ ಆಂದೋಲನವನ್ನಾಗಿ ಪರಿವರ್ತಿಸಿ ಅದನ್ನೇ ಮುಂದೆ ಪ್ರಬಲ ರಾಜಕೀಯ ವೇದಿಕೆಯನ್ನಾಗಿ ಲೋಕಮಾನ್ಯಗೊಳಿಸಿದವರು ಲೋಕಮಾನ್ಯ ಬಾಲಗಂಗಾಧರ ತಿಲಕರು.

ಆಂಗ್ಲ ರಾಜಸತ್ತೆಯನ್ನು ಬುಡಮೇಲು ಮಾಡುವ ರಾಜದ್ರೋಹ (Sedition)ದ ಮೊದಲ ಪ್ರಕರಣದ ಆರೋಪಿಯಾದವರು ಲೋಕಮಾನ್ಯ ತಿಲಕರು. ಮುಂದೆಯೂ ಇನ್ನೆರಡು ರಾಜದ್ರೋಹದ ಪ್ರಕರಣಗಳು ಅವರ ವಿರುದ್ಧ ದಾಖಲಾದವು. 1897ರಲ್ಲಿ ಪ್ಲೇಗ್ ರೋಗದ ಸೋಂಕು ಪೂನಾ ಪ್ರದೇಶವನ್ನು ಆವರಿಸಿದ್ದಿತು. ಪ್ಲೇಗ್ ಅಧಿಕಾರಿಯಾಗಿದ್ದ ರ್‍ಯಾಂಡ್ ತನ್ನ ಅತೀರೇಕಗಳಿಂದ ಜನ ವಿರೋಧಿಯೆನಿಸಿಕೊಂಡಿದ್ದನು. ಅದರಿಂದ ಬೇಸತ್ತು ರೋಷಗೊಂಡ ಚಾಪೇಕರ ಸಹೋದರರು ಅವನನ್ನು ಗುಂಡಿಕ್ಕಿ ಕೊಂದರು. ತಿಲಕರು ಚಾಪೇಕರರನ್ನು ಸಮರ್ಥಿಸಿ ತಮ್ಮ ಕೇಸರಿ ಪತ್ರಿಕೆಯಲ್ಲಿ ಲೇಖನವನ್ನು ಬರೆದರು. 'ಅಫಜಲ ಖಾನನಂತಹ ದುಷ್ಟನನ್ನು ಕೊಲ್ಲಲು ಶಿವಾಜಿ ಮಹಾರಾಜನೇ ಬರಬೇಕಾಯಿತು'. ಎಂದರು. 'ಅಯ್ಯೋ ನನ್ನ ದೇಶದ ಸರ್ವನಾಶವು ನನ್ನ ಕಣ್ಣ ಮುಂದೆಯೇ ನಡೆಯುತ್ತಿದೆ. ವಿದೇಶಿಯರು ನನ್ನ ರಾಷ್ಟ್ರ ಲಕ್ಷ್ಮಿಯನ್ನು ಎಳೆದೊಯ್ಯುತ್ತಿದ್ದಾರೆ. ಅದರೊಂದಿಗೆ ಭಯಂಕರವಾದ ಬರಗಾಲವು ಜನರನ್ನು ಕಾಡುತ್ತಿದೆ. ರಾಜರೆಲ್ಲರೂ ಚದುರಂಗದ ದಾಳಗಳಂತೆ ವಿದೇಶಿಯರ ಇಚ್ಛೆಗೆ ಅನುಸಾರವಾಗಿ ನಡೆಯುತ್ತಿದ್ದಾರೆ; ಎಂದು ಪತ್ರಿಕೆಯಲ್ಲಿ ಬರೆದ ದೇಶ ಪ್ರೇಮಿಯೊಬ್ಬರ

ಸ್ವಗತದಂತಹ ಮಾತು; ಬ್ರಿಟಿಷರನ್ನು ಕೊಲ್ಲಲು ಪ್ರಚೋದಿಸುತ್ತದೆ. ಎಂಬ ಆರೋಪವನ್ನು ತಿಲಕರ ಮೇಲೆ ಹೇರಲಾಯಿತು. ಈ ಪ್ರಕರಣದಲ್ಲಿ ತಿಲಕರು 18 ತಿಂಗಳ ಸೆರವಾಸವನ್ನು ಅನುಭವಿಸಿದರು.

1908ರಲ್ಲಿ ತಿಲಕರು ಬಂಗಾಳದ ಕ್ರಾಂತಿಕಾರಿ ಚಟುವಟಿಕೆಗಳನ್ನು ಬೆಂಬಲಿಸಿದರು ಎನ್ನುವ ಕಾರಣದಿಂದ ಮತ್ತೊಮ್ಮೆ ಸೆಡೆಷನ್ ಆರೋಪವನ್ನು ಅವರ ಮೇಲೆ ಹೊರಿಸಲಾಯಿತು. 18 ವರ್ಷದ ಕ್ರಾಂತಿಕಾರಿ ಕಿಶೋರರಾದ ಖುದಿರಾಮ ಬೋಸ್ ಮತ್ತು ಪ್ರಫುಲ್ಲ ಚಂದ್ರ ಚಾಕಿ ದೇಶಭಕ್ತರ ಕಟು ವಿರೋಧಿಯಾಗಿದ್ದ ಮುಜಫರ್‌ಪುರದ ಮ್ಯಾಜಿಸ್ಟ್ರೇಟ್ ಕಿಂಗ್ಸ್‌ಫೋರ್ಡ್ ನನ್ನು ಗುಂಡು ಹಾರಿಸಿ ಕೊಂದರು. ಪ್ರಫುಲ್ಲಚಂದ್ರನು ಪೋಲೀಸರಿಗೆ ಸೆರೆಯಾಗಬಾರದೆಂದು ತನಗೆ ತಾನೇ ಗುಂಡು ಹಾರಿಸಿಕೊಂಡು ಪ್ರಾಣ ಬಿಟ್ಟನು. ಖುದಿರಾಮನು ಗಲ್ಲಿಗೇರಿದ ಮೊದಲ ಕಿರಿಯ ಹುತಾತ್ಮನೆನಿಸಿದನು. 'ಸ್ವಾತಂತ್ರ್ಯಕ್ಕಾಗಿ ಹಿಂಸೆಯ ದಾರಿಯು ಕೂಡಾ ಯುಕ್ತವೆನಿಸುತ್ತದೆ! ಎಂದು ತಿಲಕರು ಬರೆದರು. 1908ರಲ್ಲಿ ಕೇಸರಿಯಲ್ಲಿ ಪ್ರಕಟವಾದ ಅವರ ಮೂರು ಲೇಖನಗಳು ವಿದೇಶಿ ಆಡಳಿತದ ವಿರುದ್ಧ ಬರೆದ ತೀಕ್ಷ್ಣವಾದ ಲೇಖನಗಳೆನಿಸಿದವು'. ಆಂಗ್ಲ ಆಡಳಿತ ಮತ್ತು ಪ್ರಜೆಗಳ ನಡುವಿನ ಸೌಹಾರ್ದಯುತ ಸಂಬಂಧವನ್ನು ತಿಲಕರ ಲೇಖನಗಳು ಹದಗೆಡಿಸುತ್ತಿವೆ, ಇದು ಸರ್ಕಾರದ ವಿರುದ್ಧ ಅವಿಧೇಯತೆ ಮತ್ತು ವಿದ್ವೇಷವನ್ನು ಬೆಳೆಸುತ್ತಿದೆ. ಆಡಳಿತದ ಅಧಿಕಾರವನ್ನು ಅಗೌರವಿಸುವುದು ಕಟುವಾದ ರಾಜದ್ರೋಹವೆಂದು ತಿಲಕರನ್ನು ಆರೋಪಿಸಲಾಯಿತು.

'ಪತ್ರಿಕಾ ಸ್ವಾತಂತ್ರ್ಯದ ರಕ್ಷಕನೆನ್ನುವ ಇಂಗ್ಲೆಂಡ್, ತಾನು ಆಳುವ ಭಾರತದ ಪ್ರಜೆಗಳಿಗೆ ಅಂತಹ ಸ್ವಾತಂತ್ರ್ಯವನ್ನು ನೀಡುತ್ತಿದೆಯೇ? ಎಂದು ತಿಲಕರು ಪ್ರಶ್ನಿಸಿದರು. ಈ ಪ್ರಕರಣದಲ್ಲಿ ತಿಲಕರಿಗೆ ಆರು ವರ್ಷಗಳ ಗಡಿಪಾರು ಶಿಕ್ಷೆಯನ್ನು ವಿಧಿಸಲಾಯಿತು. ಬರ್ಮಾ ದೇಶದ ಮಂಡಾಲೆಯಲ್ಲಿ ಅವರು ಸೆರೆವಾಸವನ್ನು ಕಳೆದರು. ಅವರ ಶಿಕ್ಷೆಯ ವಿರುದ್ಧ ಮುಂಬಯಿ ನಗರವು 7 ದಿನಗಳ ಬಂದ್ ಆಚರಿಸಿತು. ರೈಲ್ವೇ ಮತ್ತು ಜವುಳಿ ಕಾರ್ಮಿಕರು 6 ದಿನಕಾಲ ಮುಷ್ಕರವನ್ನು ಹೂಡಿದರು. ಸರ್ಕಾರವು ಗಲಭೆಯನ್ನು ನಿಯಂತ್ರಿಸಲಾಗದೆ ನಗರವನ್ನು ಸೇನೆಗೆ ಒಪ್ಪಿಸಿತು. ಗಲಭೆಯಲ್ಲಿ 16ಜನ ಕಾರ್ಮಿಕರು ಸಾವಿಗೀಡಾದರು. 52 ಮಂದಿ ತೀವ್ರ ಗಾಯಾಳುಗಳಾದರು.

ತಿಲಕರ ಬಂಧನದ ವಿರುದ್ಧ ಪತ್ರಿಕೆಗಳೆಲ್ಲವೂ ಸರ್ಕಾರವನ್ನು ಖಂಡಿಸಿದವು. ಅವುಗಳಲ್ಲಿ ಹಲವರಿಗೆ ಅವರೊಂದಿಗೆ ಭಿನ್ನಾಭಿಪ್ರಾಯಗಳಿದ್ದವು. ಆದರೂ ಅವರೆಲ್ಲರೂ ತಮ್ಮ ಪತ್ರಿಕೆಗಳ ಪುಟಗಳನ್ನು ಕಪ್ಪು ಬಣ್ಣದಲ್ಲಿ ಪ್ರಕಟಿಸಿದವು. ದಾದಾಭಾಯಿ ನವರೋಜಿಯವರು ಆಗ ಲಂಡನ್ನಿನಲ್ಲಿದ್ದರು. ಅವರು ತಿಲಕರನ್ನು ಹುತಾತ್ಮನೆಂದು ಬಣ್ಣಿಸಿದರು. ಸಾರ್ವಜನಿಕ ಜನತೆಯು ಇದೇ ಸಂದರ್ಭದಲ್ಲಿ ಅವರನ್ನು ಲೋಕಮಾನ್ಯರೆಂದು ಕರೆಯಿತು. ಅದೇ ಡಿಸೆಂಬರ್ ತಿಂಗಳಲ್ಲಿ ಅಮರಾವತಿಯಲ್ಲಿ ಕಾಂಗ್ರೆಸ್ ಅಧಿವೇಶನವು ಜರುಗಿತು. ಅಧ್ಯಕ್ಷರಾದ ಸುರೇಂದ್ರನಾಥ ಬ್ಯಾನರ್ಜಿಯವರು ತಮ್ಮ ಭಾಷಣದಲ್ಲಿ 'ತಿಲಕರ ಬಂಧನದಿಂದ ಇಡೀ ದೇಶವು ಕಣ್ಣೀರಿಟ್ಟಿದೆ' ಎಂದು ಅವರು ಹೇಳುತ್ತಿದ್ದಂತೆ ಸಭೆಯ ಜನಸ್ತೋಮವು ಎದ್ದು ಕಣ್ಣುತುಂಬಿಕೊಂಡು ತಲೆಬಾಗಿ ನಿಂತಿತು.

ಕೇಸರಿಯ ಲೇಖನದ ಕುರಿತು ಕ್ಷಮೆ ಕೇಳಿ ಸೆರೆವಾಸವನ್ನು ಕಡಿಮೆಗೊಳಿಸಬಹುದು

ಎಂದು ಬಹಳ ಜನರು ಅವರಿಗೆ ತಮ್ಮ ಸಲಹೆಯನ್ನು ನೀಡಿದರು. ತಿಲಕರು ಅಂತಹ ಸಲಹೆಗಳನ್ನು ನೇರವಾಗಿ ನಿರಾಕರಿಸಿದರು. "ನನ್ನನ್ನು ಮತ್ತು ನನ್ನ ಸ್ವಾತಂತ್ರ್ಯ ಪ್ರಿಯ ಸ್ವಭಾವವನ್ನು ಮೆಚ್ಚಿದ ಜನತೆಯು ನನ್ನನ್ನು ನಾಯಕನೆಂದು ಒಪ್ಪಿದೆ. ಅವರೆಲ್ಲರ ಮನಸ್ಸನ್ನು ಸರ್ಕಾರವೂ ಕಲುಷಿತಗೊಳಿಸಲು ಸರ್ವ ಪ್ರಯತ್ನವನ್ನು ಮಾಡುತ್ತಿದೆ. ಇಂತಹ ಕಾಲದಲ್ಲಿ ಧೈರ್ಯ ಗುಂದುವುದೆಂದರೆ ಜನರು ನನ್ನ ಮೇಲಿಟ್ಟ ಭರವಸೆಯನ್ನು ಘಾತಗೊಳಿಸಿದಂತೆ. ನಾನು ದುರ್ಬಲನಲ್ಲ" ಎಂದು ತಿಲಕರು ಘೋಷಿಸಿದರು.

ಮಂಡಾಲೆಯಲ್ಲಿ ಅವರು ಮಧುಮೇಹ ಪೀಡಿತರಾದರು. ಆರೋಗ್ಯವು ದುರ್ಬಲವಾಯಿತು. ಆ ಪರಿಸ್ಥಿತಿಯಲ್ಲೂ ತಿಲಕರು ಗೀತೆಯ ಮೇಲೆ ವಿದ್ವತ್ಪೂರ್ಣವಾದ ತಮ್ಮ ವ್ಯಾಖ್ಯಾನ ಗೀತಾರಹಸ್ಯವನ್ನು ಬರೆದರು. ಅದರ ಮಾರಾಟದ ಆದಾಯವೆಲ್ಲವನ್ನು ಕಾಂಗ್ರೆಸ್ ಕಾರ್ಯಕ್ರಮಗಳಿಗೆ ದೇಣಿಗೆಯನ್ನಾಗಿ ಅರ್ಪಿಸಿದರು.

1916ರಲ್ಲಿ ಭಾರತಕ್ಕೆ ಸ್ವಯಂ ಆಡಳಿತವನ್ನು ಪ್ರತಿಪಾದಿಸುವ ಹೋಂ ರೂಲ್ ಚಳುವಳಿಯನ್ನು ಪ್ರಾರಂಭಿಸಿದುದಕ್ಕಾಗಿ ಆಂಗ್ಲ ಸರ್ಕಾರವು ತಿಲಕರ ಮೇಲೆ ಮೂರನೇ ರಾಜದ್ರೋಹದ ಮೊಕದ್ದಮೆಯನ್ನು ಹೂಡಿತು. ಬೆಳಗಾವಿ ಮತ್ತು ಅಹಮ್ಮದ್ ನಗರಗಳಲ್ಲಿ ಅವರು ಮಾಡಿದ ಭಾಷಣವನ್ನು ಸಾಕ್ಷ್ಯವನ್ನಾಗಿ ಮುಂದಿಡಲಾಯಿತು. 'ಭಾರತೀಯರಿಗೆ ತಮ್ಮನ್ನು ಆಳುವಂತಹ ಸಾಮರ್ಥ್ಯವಿಲ್ಲವೆನ್ನುವ ಬಾಲಿಶ ಭಾವನೆಯನ್ನು ಬಿಟ್ಟು ಬಿಡಿ. ಇಂಗ್ಲೆಂಡಿನ ಪ್ರಜೆಗಳಿಗಿರುವ ಅಧಿಕಾರವೆಲ್ಲವೂ ಭಾರತೀಯರಿಗೂ ದೊರಕಬೇಕು'. ಎಂದು ತಿಲಕರು ಕರೆ ನೀಡಿದರು. 1916ರಲ್ಲಿ ತಿಲಕರ 60ನೇ ಹುಟ್ಟುಹಬ್ಬವು ಬಂದಿತು. ಮುಂಬಯಿ ನಾಗರಿಕರು ಅವರಿಗೆ ಒಂದು ಲಕ್ಷ ರೂಪಾಯಿಗಳ ನಿಧಿಯನ್ನು ಅರ್ಪಿಸಿದರು.

ಮುಂದೆ 1922ರಲ್ಲಿ ಗಾಂಧೀಜಿಯವರನ್ನು ಇದೇ ರಾಜದ್ರೋಹದ ಸೆಕ್ಷನ್ ಮೂಲಕ ಆರೋಪವನ್ನು ಹೊರಿಸಿ ವಿಚಾರಣೆಯು ನಡೆಯಿತು. "ತಿಲಕರಂತಹ ಮಹಾನಾಯಕರನ್ನು ಸೆರಮನೆಗೆ ದೂಡಲು ಹೊರಿಸಿದ ಅಪರಾಧವನ್ನು ನನ್ನ ಮೇಲೂ ಹೊರಿಸಿದುದು ನನಗೆ ನೀಡಿದ ಮಹಾಪ್ರಶಸ್ತಿ ಎಂದುಕೊಳ್ಳುವೆ' ಎಂದು ಗಾಂಧೀಜಿ ಸಾರಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಕೆಳಮಧ್ಯಮ ವರ್ಗದ ರೈತರು, ಗುಡಿಕೈಗಾರಿಕೆಯ ಕಸುಬುದಾರರು, ಕಾರ್ಮಿಕರು ತೊಡಗಬೇಕೆಂಬುದನ್ನು ಮೊದಲು ಮನಗೊಟ್ಟವರು ಲೋಕಮಾನ್ಯ ತಿಲಕರು. 1897ರ ಕೇಸರಿಯ ಸಂಚಿಕೆಗಳಲ್ಲಿ ರೈತರ ಕುರಿತು ಆಲಸ್ಯ ಮತ್ತು ನಿರಾಸಕ್ತಿಗಳು ಪ್ರಮಾದಗಳಿಗೆ ದಾರಿಯಾಗುವುವು ಎನ್ನುವ ಲೇಖನಗಳನ್ನು ತಿಲಕರು ಬರೆದರು. ರೈತರು ದೇಶದ ಆತ್ಮವಾಗಿರುವರು. ರೈತರೇನಾದರೂ ಕಾಂಗ್ರೆಸ್‌ನಲ್ಲಿ ಬಹು ಸಂಖ್ಯೆಯಲ್ಲಿ ಸಕ್ರಿಯರಾದರೆಂದರೆ ಸರ್ಕಾರಕ್ಕೆ ಕಾಂಗ್ರೆಸ್ಸನ್ನು ಅಲಕ್ಷಿಸಲು ಸಾಧ್ಯವಾಗದು. ಎಂದು ಕೇಸರಿಯ ಮೂಲಕ ಅವರು ಪ್ರತಿಪಾದಿಸಿದರು. ತಿಲಕರು ಮರಾಠಾ ಮತ್ತು ಕೇಸರಿ ಪತ್ರಿಕೆಗಳನ್ನು ಪ್ರಾರಂಭಿಸಿದಾಗ ದೇಶದ ಮೂರನೇ ಒಂದು ಭಾಗದ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವದಲ್ಲಿ ಸಕ್ರಿಯವಾಗಿದ್ದವು.

ವಂಗಭಂಗವು ಸ್ವಾತಂತ್ರ್ಯದ ಬಯಕೆಯನ್ನು ಧಾರ್ಮಿಕ ಕರ್ತವ್ಯವೆನಿಸುವಂತೆ ಮಾಡಿತು. ಅದನ್ನು ಸಾಧಿಸಿದವರು ಲೋಕಮಾನ್ಯತಿಲಕರು. ಸ್ವಾತಂತ್ರ್ಯಕ್ಕಾಗಿ ನಡೆಯುವ

ಸಂಘರ್ಷದಲ್ಲಿ ದೇವಿ ಕಾಳಿಗೆ ಬಲಿ ನೀಡಲೇಬೇಕು ಎಂದು ಅವರು ಬರೆದರು. ಬ್ರಿಟಿಷರ ಕೈಗಾರಿಕಾ ನೀತಿಯನ್ನು ತಿಲಕರು ಉಗ್ರವಾಗಿ ವಿಮರ್ಶಿಸುತ್ತಿದ್ದರು. ಆಂಗ್ಲರು ಪ್ರಾರಂಭಿಸಿದ ರೈಲ್ವೇಯನ್ನು ವೈಭವೀಕರಿಸುವುದೆಂದರೆ' ಪರರ ಪತ್ನಿಯನ್ನು ಸಿಂಗರಿಸಿ ಸಂತೋಷ ಪಡುವುದು' ಎಂದು ಅವರು ವ್ಯಂಗ್ಯವಾಡಿದ್ದರು. ಬ್ರಿಟಿಷರ ಕೈಗಾರಿಕೆಗೆ ಭಾರತವು ಸಬ್ಸಿಡಿಯಾಗಿ ರೈಲ್ವೇಯನ್ನು ನೀಡಿದೆ ಎನ್ನುವುದು ತಿಲಕರ ವಿಮರ್ಶೆಯಾಗಿದ್ದಿತು.

ಭಾರತವು ತನ್ನತನವನ್ನು ಪ್ರದರ್ಶಿಸಿ ಅಭಿಮಾನ ಪಡುವುದು ಸ್ವಾಭಿಮಾನದ ಹೆಜ್ಜೆ, ಅದುವೆ ಸ್ವಾತಂತ್ರ್ಯದ ಹಂಬಲಕ್ಕೆ ದಾರಿಯಾಗುವುದೆಂದು ಅವರು ಪ್ರಾರಂಭಿಸಿದ ಶಿವಾಜಿ ಉತ್ಸವ ಮತ್ತು ಗಣೇಶೋತ್ಸವಗಳು ಮುಂದೆ ಸಾರ್ವಜನಿಕ ಉತ್ಸಾಹ ಉತ್ಸವಗಳಿಗೆ ದಾರಿ ಮಾಡಿಕೊಟ್ಟವು. ಮರಾಠ ಹಿಂದು ವೈಭವವು ಸ್ವಾಭಿಮಾನದ ಗುರುತಾದರೆ ಗಣೇಶೋತ್ಸವವು ಮನೆಬಿಟ್ಟು ಹಿಂದು ಸಮಾಜವು ಸಾರ್ವಜನಿಕವಾಗಿ ಒಂದು ಸೇರುವುದನ್ನು ಮನಗಂಡಿತು. ಅಸ್ಪೃಶ್ಯತೆಯ ಕಳಂಕವನ್ನು ಬಿಟ್ಟು ಬರುವಲ್ಲಿ ಸಾಧನವಾಯಿತು. ಇದೇ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ಅಸ್ಪೃಶ್ಯರೆನಿಸುವ ಸಮಾಜದ ಜನರನ್ನು ಕಡ್ಡಾಯವಾಗಿ ಸದಸ್ಯರಾಗುವಂತೆ ಮಾಡಬೇಕೆನ್ನುವ ನಿಯಮವನ್ನು ತಂದುದೂ ಕೂಡಾ ಇದೇ ಕಾರಣದಿಂದ. ಅದಕ್ಕೆ ಪ್ರೇರಕರಾದವರು ಲೋಕಮಾನ್ಯ ತಿಲಕರು.

ಆಗಿನ್ನೂ ಇಂಗ್ಲೆಂಡು ಭಾರತದ ರಕ್ಷಕನಾಗಿರುವುದು ದೇಶದ ಪುಣ್ಯ ಎನ್ನುವ ಭಾವನೆಯು ಸಾರ್ವತ್ರಿಕವಾಗಿದ್ದಿತು. ಇಂಗ್ಲಿಷ್ ಭಾಷೆ, ಉಡುಪು, ರೀತಿ ನೀತಿಗಳು ಸರ್ವಮಾದರಿ ಎನಿಸಿಕೊಂಡಿತ್ತು. ಭಾರತದಲ್ಲಿ ಕಾಣುವ ಸಾಮಾಜಿಕ ಕೆಡುಕುಗಳು ಎಲ್ಲಾ ಕಡೆಯೂ ಕಾಣಬರುವ ಲೋಪದೋಷಗಳೇ ಎನ್ನುವುದು ಸಾಮಾನ್ಯ ಆಕ್ಷೇಪಗಳೇ ಆಗಿದ್ದವು. 1890ರಲ್ಲಿ ತಿಲಕರೂ, ರಾನಡೆಯವರೂ, ಭಂಡಾರ್ಕರಂತಹ ಉದ್ದಾಮ ವಿದ್ವಾಂಸರೂ ಸಮಾಜ ಸುಧಾರಣೆಯ ಕಳಕಳಿಯ ಮಹನೀಯರೂ ಸೇರಿ ಪಾಂಜಾಬ್ ಮಿಷನ್ ಎನ್ನುವ ಕ್ರೈಸ್ತ ಸಭೆಯ ಮಹನೀಯರೊಂದಿಗೆ ಚಹಾಸ್ವೀಕಾರ ಮಾಡಿದರು. ಇದು ಹಿಂದು ಧರ್ಮದ ಜಾತಿ ನಿಯಮಗಳನ್ನೂ ಕಟ್ಟಳೆಗಳನ್ನು ಮೀರಿದ ಕೃತ್ಯವೆಂದು ಆರೋಪಿಸಿದ ಹಿಂದು ಸಮಾಜದ ನಾಯಕರು ತಿಲಕರನ್ನು ಸೇರಿಸಿ 42 ಹಿರಿಯರನ್ನು ಬಹಿಷ್ಕರಿಸಲು ಕರೆಕೊಟ್ಟರು. ಆದರೆ ನಂತರ ತಿಲಕರಂತಹ ವೇದ ಪಾರಂಗತರನ್ನು ವಾದದಲ್ಲಿ ಎದುರಿಸಲಾಗದೆ ಕೈಕೈಹಿಸುಕಿಕೊಂಡರು.

ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಒಂದಿಷ್ಟು ಕೈ ಮೀರಿದರೂ ಸಮಾಜ ಸುಧಾರಣೆಯು ಕೈಬಿಟ್ಟು ಹೋಗುವುದರೊಂದಿಗೆ ರಾಜಕೀಯ ಕೆಲಸಕಾರ್ಯಗಳಿಗೂ ಅಡ್ಡಿಯಾಗುವ ಪರಿಸ್ಥಿತಿಯು ಉಂಟಾಗಬಹುದಾಗಿದ್ದಿತು. ಒಮ್ಮೆಯಂತೂ ಇಂತಹ ಸಾಮಾಜಿಕ ಕಾರ್ಯಕ್ರಮದೊಂದಿಗೆ ಅಂತರವನ್ನು ಕಾಯ್ದುಕೊಳ್ಳಲು ಕಾಂಗ್ರೆಸ್ ಕಾರ್ಯಕ್ರಮದ ಪೆಂಡಾಲ್‌ನಲ್ಲಿ ಸಾಮಾಜಿಕ ಕಾರ್ಯಕ್ರಮವನ್ನು ನಡೆಸಲು ಅವಕಾಶ ನೀಡದೆ ಇರಬೇಕಾಯಿತು. ಸಾಮಾನ್ಯ ಜನರಿಗೂ ಸೈ ಎನ್ನುವ ವಿಚಾರಗಳನ್ನು ಮಾತ್ರ ಸ್ವಾತಂತ್ರ್ಯ ಹೋರಾಟದಲ್ಲಿ ಸಮೀಕರಿಸುವುದು ಆ ಹಂತದಲ್ಲಿ ಸಾಧ್ಯವಾದ ಮಾತೆನಿಸಿತು.

ಆದರೂ ಕಾಲಕ್ರಮೇಣ ಹಲವು ಹಂತಗಳಲ್ಲಿ ಸಮಾಜ ಸುಧಾರಣೆ ನೀತಿಯನ್ನು ಅಳವಡಿಸಿಕೊಳ್ಳಲು ತಿಲಕರು ಯಶಸ್ವಿಗಳಾದರು. ವಿದೇಶಿ ಪ್ರಯಾಣವು ನಿಷಿದ್ಧವಾಗಿರುವಾಗ

ಅದು ಅಗತ್ಯವಾದುದು; ಆದರೆ ನಿಷಿದ್ಧವಾಗಬೇಕಾದುದು ಅದರೊಂದಿಗೆ ಬರುವ ಮದ್ಯಪಾನ ಮತ್ತು ಮಾಂಸಾಹಾರ ಎನ್ನುವ ನಿಯಮವನ್ನು ಒಪ್ಪುವಂತಾಯಿತು. ವೇದಗಳು ಬಾಲವಿಧವೆಯರ ವಿವಾಹವನ್ನು ಸಮ್ಮತಿಸಿವೆ. ಆದುದರಿಂದ ವಿಧವಾ ವಿವಾಹವು ಸೂಕ್ತವಾದುದು ಎನ್ನುವ ಸಮ್ಮತಿಯ ಅಂಶವು ಸೇರಿಕೊಂಡಿತು. ಅಂತರ್ಜಾತಿಯ ವಿವಾಹಕ್ಕೆ ಮೊದಲು ಉಪಜಾತಿಗಳಲ್ಲಿ ಮದುವೆಯು ಮಾನ್ಯತೆಯನ್ನು ಪಡೆಯಲಿ ಎನ್ನುವ ಪ್ರಯತ್ನಗಳಿಗೆ ಪುಟದೊರೆಯಿತು. ವೇದಕಾಲದಲ್ಲಿ ಪ್ರಚಲಿತವಾದ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸೋಣ, ಅದೇರೀತಿ ಅಸ್ಪೃಶ್ಯತೆಗೂ ಅವಕಾಶವಿಲ್ಲ. ಬಾಲ್ಯ ವಿವಾಹವು ಸರಿಯಲ್ಲ ಎನ್ನುವ ಸಾಮಾನ್ಯ ಸರಳ ಪ್ರಯತ್ನಗಳಿಗೆ ಸರ್ವ ಸಮ್ಮತಿ ಸಿಗುವ ಹಂತವನ್ನು ತಿಲಕರ ನೇತೃತ್ವವು ಸಾಧಿಸಿತು.

ತಮ್ಮ ಮಗಳು ಕೃಷ್ಣಾಳು ಶಾಲಾಶಿಕ್ಷಣವನ್ನು ಪೂರೈಸುವಂತೆ ಮಾಡಿದ ಲೋಕಮಾನ್ಯರು ಹೆಣ್ಣುಮಕ್ಕಳ ಒಪ್ಪಿತ ವೈವಾಹಿಕ ವಯಸ್ಸು ಮುಟ್ಟಿದ ಮೇಲೇಯೇ ಆಕೆಯ ವಿವಾಹವನ್ನು ನಡೆಸಿಕೊಟ್ಟರು. ಹಿಂದು ಧಾರ್ಮಿಕ ವಿದುಷಿ ಎಂದು ಕರೆಸಿಕೊಂಡ ಪಂಡಿತ ರಮಾಬಾಯಿಯು ಕ್ರೈಸ್ತಳಾಗಿ ಮತಾಂತರಗೊಂಡಳು. ಆಕೆಯು ಹಿಂದು ವಿಧವೆಯರಿಗಾಗಿ ಶಾಲೆಯನ್ನು ನಡೆಸುತ್ತಿದ್ದಳು ಮತ್ತು ಆ ಮೂಲಕ ಮತಾಂತರ ಕಾರ್ಯವನ್ನು ನಡೆಸುತ್ತಿದ್ದಳು. ಇದನ್ನು ಗಮನಿಸಿದ ಲೋಕಮಾನ್ಯ ತಿಲಕರು ಆಕೆಯ ವಿರುದ್ಧ ಪ್ರಚಾರವನ್ನು ಪ್ರಾರಂಭಿಸಿದರು. ಇದು ತಿಲಕರಿಗಿರುವ ಸ್ತ್ರೀ ವಿದ್ಯಾಭ್ಯಾಸದ ಕುರಿತು ಪೂರ್ವಗ್ರಹವೆಂದುಕೊಂಡ ಜಸ್ಟೀಸ್ ರಾನಡೆಯವರೂ ಭಂಡಾರ್ಕರರೂ ತಿಲಕರನ್ನೇ ವಿರೋಧಿಸಿದರು. ಆದರೆ 12.12.1889 ರ ನ್ಯೂಯಾರ್ಕ್ ಕ್ರಿಶ್ಚಿಯನ್ ವೀಕ್ಲಿಯು ರಮಾಬಾಯಿಯ ಶಿಕ್ಷಣ ಕ್ರಮವು ಕ್ರೈಸ್ತ ವಿಚಾರಗಳಿಂದ ಸ್ಫೂರ್ತಿ ಪಡೆದುದೆಂದು ಹೊಗಳಿ ಬರೆದ ಲೇಖನವನ್ನು ತಿಲಕರು ಆ ಹಿರಿಯರ ಗಮನಕ್ಕೆ ತಂದರು. ಇದಾದ ಮೇಲೆ ರಾನಡೆಯವರೂ ಭಂಡಾರ್ಕರರೂ ಆಕೆಯ ಎಲ್ಲಾ ಸಂಸ್ಥೆಗಳೊಂದಿಗೆ ತಮ್ಮ ಸಂಬಂಧವನ್ನು ಕಡಿದುಕೊಂಡರು.

ಸುಧಾರಣೆಯ ಹುರುಪು ದುರುಪಯೋಗವಾಗಬಾರದು ಎನ್ನುವ ಅರಿವು ತಿಲಕರಿಗಿದ್ದಿತು. ವಿಧವಾ ವಿವಾಹವು ಒಪ್ಪಿತವಾದುದು ಆದರೆ 40 ವರ್ಷ ಮೀರಿದ ಪುರುಷರು ಈ ವಿವಾಹದ ಸೂಕ್ತ ವರರಲ್ಲ ಎನ್ನುವ ತಡೆಯನ್ನು ತಿಲಕರು ಒತ್ತಾಯಿಸಿದರು. ಹುಡುಗರ ವಿವಾಹ ವಯಸ್ಸು 20 ಮತ್ತು ವಧುವಿನ ವಯಸ್ಸು 11 ಮೀರಬೇಕು ಎನ್ನುವುದಕ್ಕೆ ಸರ್ವಸಮ್ಮತಿ ದೊರಕಿತು.

ವಿಧವೆಯರು ತಮ್ಮ ಕುಂಕುಮ ಬಳೆಗಳಂತಹ ಮಂಗಳ ಲಕ್ಷಣಗಳನ್ನು ತ್ಯಜಿಸಬೇಕಾಗಿಲ್ಲ ಎನ್ನುವುದು ತಿಲಕರ ಪ್ರಯತ್ನವಾಗಿದ್ದಿತು. 1908ರಲ್ಲಿ ಸಾಂಗ್ಲಿಯಲ್ಲಿ ಅಸ್ಪೃಶ್ಯರೆನಿಸುವವರ ಕಾಲೋನಿಗೆ ತಿಲಕರು ಭೇಟಿ ನೀಡಿದರು. ಅವರೆಲ್ಲರಿಗೂ ಗಣೇಶೋತ್ಸವದ ಮಂಟಪಗಳಿಗೆ ಮುಕ್ತ ಪ್ರವೇಶವು ದೊರಕುವಂತಹ ವಾತಾವರಣವು ನಿರ್ಮಾಣವಾಯಿತು. ಪುಣೆಯ ಕಾರ್ಯಕ್ರಮವೊಂದರಲ್ಲಿ “ಅಸ್ಪೃಶ್ಯತೆಯನ್ನು ದೇವರು ಸರಿಯೆನ್ನುವುದಾದರೆ ಆತನು ನನ್ನ ದೇವನಾಗಲಾರ” ಎಂದು ಘೋಷಿಸಿದರು. ಪುಣೆಯ ಶುಕ್ರವಾರ ಪೇಟೆಯಲ್ಲಿ ವೇಶ್ಯೆಯರು ವಾಸಿಸುವ ಪ್ರದೇಶದಲ್ಲಿ ಅವರನ್ನು ಕುರಿತು ಮಾತನಾಡುತ್ತಾ ತಿಲಕರು “ಭಗವಂತನು ಸಮಾಜದಲ್ಲಿರುವ ಪ್ರತಿಯೊಬ್ಬನನ್ನು ಪ್ರತಿನಿಧಿಸುವನು ಎಂದು ಪುರುಷ ಸೂಕ್ತವು ವರ್ಣಿಸುವಾಗ ಯಾರೇ ಆಗಲಿ ಕನಿಷ್ಟನಾಗಿರಲು ಸಾಧ್ಯವೇ” ಎಂದು ವಿವರಿಸಿದರು.

ಸ್ವಾತಂತ್ರ್ಯದ ಹಂಬಲವನ್ನು ಭಾರತವಿಡೀ ವ್ಯಾಪಿಸುವಂತೆ ಜನತೆಯ ಮನಸ್ಸು ಮತ್ತು ಹೃದಯಗಳನ್ನು ಸಿದ್ಧಗೊಳಿಸಿದ ಮಹಾನುಭಾವರು ಲೋಕಮಾನ್ಯ ತಿಲಕರು. 1891ರಲ್ಲಿ ಕನ್ಯೆಯ ವಿವಾಹದ ವಯಸ್ಸನ್ನು 10 ರಿಂದ 12ಕ್ಕೆ ಏರುವಲ್ಲಿ ಆಂಗ್ಲ ಸರ್ಕಾರದ ಅಧಿಕಾರಿಗಳ ಬೆಂಬಲ ಪಡೆದರು. ತಿಲಕರು ನಮ್ಮ ಸಮಾಜದ ಕಟ್ಟು ಕಟ್ಟಳೆಗಳನ್ನು ನಿರ್ಧರಿಸುವಲ್ಲಿ, ವಿಧಿವಿಧಾನಗಳಲ್ಲಿ ಪರಕೀಯ ಸರ್ಕಾರವೇಕೆ ಮಧ್ಯಪ್ರವೇಶಿಸಬೇಕು? ಅದನ್ನು ಸಾಧಿಸುವುದು ನಮಗೆ ಅಸಾಧ್ಯವೇ ಎಂದೂ ಪ್ರಶ್ನಿಸಿದವರು. ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು. ಅದನ್ನು ಪಡೆದೇ ತೀರುತ್ತೇನೆ ಎನ್ನುವ ಸ್ವಾತಂತ್ರ್ಯದ ಅತೀವ ಕಾತರತೆಯ ವ್ಯಕ್ತಿಯಾಗಿದ್ದ ತಿಲಕರು ವಿಧವಾ ವಿವಾಹದಿಂದ ಸ್ವಾತಂತ್ರ್ಯ ಸಿಗುವುದೇ ಎಂದು ಕೇಳಿದುದೂ ಇದೆ. ಭಾರತದಲ್ಲಿ ಅಶಾಂತಿಯ ಜನಕನೆಂದು ಇಂಗ್ಲಿಷರಿಂದ ಕರೆಸಿಕೊಂಡವರು ಭಾರತವನ್ನು ಸ್ವಾತಂತ್ರ್ಯ ಸಂಘರ್ಷದ ನೆಲೆಗೆ ತಂದು ಬಿಟ್ಟರು. ಸ್ವದೇಶಿ ಚಳುವಳಿಯನ್ನು ತೀವ್ರಗಾಮಿ ಹಂತಕ್ಕೆ ತಲುಪಿಸಿದ ತ್ರಿಮೂರ್ತಿ ಲಾಲಾ ಬಾಲ ಪಾಲರಲ್ಲಿ ಪ್ರಮುಖರಾದವರು ಲೋಕಮಾನ್ಯ ಬಾಲಗಂಗಾಧರ ತಿಲಕರು.

## ಸೆಕ್ಯುಲರಿಸಂ ಎಂದರೆ ಒಂದೊಂದು ಮತಕ್ಕೆ ಒಂದೊಂದು ನ್ಯಾಯವೇ?



ಆಂಧ್ರ ರಾಜ್ಯದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಮೊದಲ ಪ್ರಮುಖ ನೀತಿಯಾಗಿ ದೇವಸ್ಥಾನಗಳನ್ನು ನಿರ್ಬಂಧಿಸುವ ಎಂಡೋಮೆಂಟ್ ಕಾನೂನುಗಳನ್ನು ಉಲ್ಲೇಖಿಸಿದರು. “ಎಂಡೋಮೆಂಟ್ ಆಕ್ಟ್ ಉದ್ದೇಶವೇನು? ದೇವಸ್ಥಾನಗಳನ್ನು ನಿರ್ಬಂಧಿಸುವುದು ಮಾತ್ರವೇ? ಸೆಕ್ಯುಲರಿಸಂನ ಗುರಿಯೆಂದರೆ ಒಂದೊಂದು ಮತಕ್ಕೆ ಒಂದೊಂದು ನ್ಯಾಯವೆಂದೇ? ಚರ್ಚ್ ಮತ್ತು ಮಸೀದಿಗಳನ್ನು ನಿಯಂತ್ರಿಸದ ಸರ್ಕಾರವು ದೇವಸ್ಥಾನದ ಮೇಲೆ ಮಾತ್ರ ಸವಾರಿ ಮಾಡುವುದು ನಾಯ್ಯವೇ? ಸೆಕ್ಯುಲರಿಸಂ ಎಂದರೆ ಎಲ್ಲರನ್ನೂ ಸಮಾನವಾಗಿ ಕಾಣುವುದು. ಎಂಡೋಮೆಂಟ್ ಕಾನೂನನ್ನು ತಿಳಿದವರಿಂದ ಸಂಪೂರ್ಣ ಅಧ್ಯಯನ ನಡೆಸುತ್ತೇವೆ. ಪಂಡಿತರು ಅದನ್ನು ಬೇಡವೆಂದು ಹೇಳಿದರೆ ಆ ಕುರಿತು ಖಚಿತವಾಗಿ ನಿಶ್ಚಿತ ನಿರ್ಧಾರಕ್ಕೆ ಬರುವೆವು” ಎಂದರು.

ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ epaper
www.vhp.org

# ರಾಷ್ಟ್ರ-ಧರ್ಮ-ಜಾಗೃತಿಗೆ ವಕೀಲರ ಮುನ್ನುಡಿ

## (ವಿಧಿ ಪ್ರಕೋಷ್ಠ ಸಮಾವೇಶದಲ್ಲಿ ಪ್ರಸ್ತುತ ಪಡಿಸಿದ ಪ್ರಾಸ್ತಾವಿಕ)

- ಪ್ರದೀಶ್ ಕುಮಾರ್ ವಿ.ಬಿ.
**ವಿಧಿ ಪ್ರಕೋಷ್ಠ ಸಂಚಾಲಕ ಕರ್ನಾಟಕ ದಕ್ಷಿಣ**




**ಕರ್ನಾಟಕ ಉಚ್ಚನ್ಯಾಯಾಲಯ ನ್ಯಾಯಾಧೀಶರಾದ ಆರ್. ದೇವದಾಸ್, ಎಮ್. ಅರುಣ್, ವಿಧಿ ಪ್ರಕೋಷ್ಠ ಅಖಿಲಭಾರತ ಸಂಚಾಲಕ ದಿಲೀಪ್ ಭಾಯಿ ತ್ರಿವೇದಿ, ಸಹಸಂಚಾಲಕ ಅಭಿಷೇಕ ಅತ್ರೆ, ಬೆಂಗಳೂರು ಬಾರ್ ಅಸೋಸಿಯೇಶನ್ ಅಧ್ಯಕ್ಷ ವಿವೇಕ ರೆಡ್ಡಿ, ಪ್ರಕಾಶ ಶೆಟ್ಟಿ ಮತ್ತು ಪ್ರದೀಶ್ ವಿ.ಬಿ.**

ಇಂದು ನಮ್ಮ ನಡುವೆ ಹಿರಿಯ ನ್ಯಾಯಮೂರ್ತಿಗಳೂ, ಅಭ್ಯಾಗತರಾಗಿ ಬಂದು ಭಾಗವಹಿಸುವ ದೇಶದ ಶ್ರೇಷ್ಠ ವಕೀಲರೂ, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ನ್ಯಾಯವಾದಿಗಳೂ ದೇಶ ಮತ್ತು ಸಮಾಜದ ಉಳಿವು ಮತ್ತು ಏಳಿಗೆಗಳ ಬಗ್ಗೆ ಆಸಕ್ತ ಸಜ್ಜನರೂ ಇರುವರು. ನಾವೆಲ್ಲರೂ ಈ ದಿನ ನಡೆಸುವ ಚರ್ಚೆ ಮತ್ತು ಸಮಾಲೋಚನೆಗಳು ಪ್ರಸ್ತುತ ದಿನಗಳಿಗೆ ಮಾರ್ಗದರ್ಶಿಯಾಗುವ ಹಲವು ಸಂಕೀರ್ಣ ವಿಚಾರಗಳನ್ನು ನೀಡುತ್ತವೆ ಎಂದು ಆಶಿಸೋಣ. ಇಂತಹ ವಿಚಾರ ಸಂಕಿರಣವನ್ನು ಪ್ರೌಢ ಮತ್ತು ಪ್ರಾಜ್ಞ ವಕೀಲರ ಸಮೂಹವು ಮಾತ್ರ ಮುಂದಿಗೂ ಮುಂದುವರೆಸಿಕೊಂಡು ಹೋಗಿ ತಾರ್ಕಿಕವೆನಿಸುವ ಉತ್ತಮ ಫಲಿತಾಂಶವನ್ನು ನೀಡಬಲ್ಲುದು.

ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಪ್ರಮುಖವಾಗಿ ಮುನ್ನಡೆಸಿಕೊಂಡು ಬಂದವರು ದೇಶದ ಎಲ್ಲಾ ಪ್ರದೇಶಗಳ ಹಿರಿಯ ವಕೀಲರು. ಹೀಗಾಗಿ ವಕೀಲರ ಸಮೂಹಕ್ಕೆ ಸ್ವಾತಂತ್ರ್ಯ ಹೋರಾಟದ ಯಶಸ್ವೀ ಇತಿಹಾಸವನ್ನು ನಿರ್ಮಿಸಿಕೊಟ್ಟ ನೆನಪಿನ ಬಳುವಳಿಯೊಂದು ರಕ್ತಗತವಾಗಿ ಬಂದಿದೆ. ಸ್ವಾತಂತ್ರ್ಯಾ ನಂತರ ಮೇಧಾವಿಗಳ ಹಿರಿತನದಲ್ಲಿ ರಚನಾತ್ಮಕ ಚಿಂತನೆಯನ್ನೂ ಸಂವಾದವನ್ನು ನಡೆಸಿ ಶ್ರೇಷ್ಠವೂ ಮಾದರಿಯೂ ಎನ್ನಿಸುವ ಸಂವಿಧಾನವನ್ನು ರಚಿಸಿದ ಹೆಮ್ಮೆಯೂ ನಮ್ಮ ಬೆನ್ನಿಗಿದೆ. ಇನ್ನು ವಕೀಲರಿಗೆ ಅವರ ಶಿಕ್ಷಣದಿಂದಲೂ ಮತ್ತು ಅನುಭವದಿಂದಲೂ ವಿಶೇಷಗುಣ ಸ್ವಭಾವವೊಂದು ದೇಣಿಗೆಯಾಗಿ ಬಂದಿರುತ್ತದೆ. ಅದೆಂದರೆ ತಮಗೆ ಸಮ್ಮತವಲ್ಲದ ವಾದವನ್ನು ಕೂಡಾ ಶಾಂತವಾಗಿ ಆಲಿಸುವುದು. ಇದರೊಂದಿಗೆ ಅಂತಹ ವಾದಕ್ಕೂ ಕೂಡಾ ತರ್ಕಬದ್ಧವಾದ ಉತ್ತರವನ್ನು ಸಿದ್ಧಗೊಳಿಸಿ ಒಪ್ಪಿಸುವ ಗುಣವು ಕೂಡಾ ವಕೀಲರಿಗಿರುತ್ತದೆ. ಇಂದು ಸೇರಿದ ನಾವೆಲ್ಲರೂ ಇಂತಹ ಮನಸ್ಸನ್ನು ನಿರ್ಮಿಸಿಕೊಂಡವರೇ ಇದ್ದೇವೆ.

ಹಾಗೆ ನೋಡಿದರೆ ಇದು ಅನಾದಿಕಾಲದಿಂದಲೂ ನಮ್ಮ ಪರಂಪರೆಯೇ ಆಗಿದೆ. ಸರ್ವಸಮ್ಮತಿಯ ಜೀವನದ ರೀತಿಯನ್ನು ನಾವು ರೂಪಿಸಿಕೊಂಡು ಬಂದವರು.



ವೈಚಾರಿಕ ಬಹುಮತದಿಂದ ನಾವು ತೃಪ್ತರಾದವರಲ್ಲ. ನಮಗೆ ಎಲ್ಲರೂ ಸೇರಿ ಒಂದಾಗಿ ಒಪ್ಪುವ ತೀರ್ಮಾನವೇ ಬೇಕಾಗಿರುವುದು. ಪ್ರಾಚೀನ ಕಾಲದಿಂದಲೂ ನಮ್ಮ ಲಕ್ಷಾವಧಿ ಗ್ರಾಮಗಳು ಪಂಚಾಯಿತಿಯ ಕಟ್ಟೆಯಲ್ಲಿ ಕೂತು ಊರ ಪಂಚರು ಎಲ್ಲರನ್ನೂ ಒಪ್ಪಿಸಿ ನೀಡಿದ ತೀರ್ಮಾನವನ್ನು ಅಂಗೀಕರಿಸುತ್ತಿದ್ದವು. ಈ ಸಮರಸತೆಯ ಬದುಕನ್ನು ನಿರ್ಮಿಸಿದ ಪ್ರಯತ್ನವೇ ನಮ್ಮ ದೇಶದ ವೈಶಿಷ್ಟ್ಯ.

ನಮ್ಮ ಪ್ರಕಾರ 'ಏಕಂ ಸತ್ ವಿಪ್ರಾ; ಬಹುಧಾ ವದಂತಿ' ಎಂದರೆ; ಇರುವ ಸತ್ಯವೆನ್ನುವಿರಾ? ಅಥವಾ ಕೊನೆಯ ಉತ್ತರವೆನ್ನುವಿರಾ? ಅದೆಲ್ಲವೂ ಒಂದೇ ಆಗಿರುತ್ತದೆ. ಆದರೆ ತಿಳಿದವರು ಅದನ್ನು ವಿವರಿಸುವಾಗ ಬಗೆಬಗೆಯಾದ ರೀತಿಯಲ್ಲಿ ಹೇಳುವರು. ಅದನ್ನು ನಾವು ಭಿನ್ನಾಭಿಪ್ರಾಯಗಳು ಎಂದು ಹೇಳುವುದಿಲ್ಲ. ಹಾಗಾಗಿ ಅದು ನಮ್ಮೊಳಗೆ ವಿರೋಧವನ್ನು ಉಂಟುಮಾಡುವುದಿಲ್ಲ. ನಮ್ಮ ಪರಂಪರೆಯಲ್ಲಿ ಈ ಉತ್ತರಗಳು ನಮಗೆ ultimate ಆದ ನಿಜವನ್ನು ಕಂಡುಕೊಳ್ಳಲು ನೆರವು ನೀಡುವ ಅವಕಾಶಗಳು. ಇಂತಹ ತಾತ್ವಿಕ ಮನಸ್ಸನ್ನು ನಿರ್ಮಿಸುವ ವಿವೇಕ (Prudence) ವು ಭಾರತದ ಮನಸ್ಸಿನ ಮೂಲವಾಗಿದೆ. ನಮ್ಮಂತಹ ಕಾನೂನು ವಿದ್ಯಾರ್ಥಿಗಳಿಗಂತೂ ಇಂತಹ ಪರಂಪರೆಯು ನಮ್ಮ ಪಾಲಿಗೆ ಬಂದ ವರವಾಗಿದೆ.




ನಮ್ಮ ದೇಶದ ಇತಿಹಾಸದಲ್ಲಿ ನಾವು ಕಂಡುದು; ರಾಷ್ಟ್ರವೆಂದರೆ ಒಂದು ಸಂಸ್ಕೃತಿ-ಒಂದು ಇತಿಹಾಸ-ಭಾಷೆ ಮತ್ತು ನಮ್ಮತನವನ್ನು ಹಂಚಿಕೊಳ್ಳುವ ಸಾಮೂಹಿಕ ಪ್ರಯತ್ನ. ಇದನ್ನು ಭದ್ರಗೊಳಿಸಲು ನಮ್ಮ ಸಮಾಜವು ಪ್ರಯತ್ನಿಸುತ್ತಲೇ ಬಂದಿತು. ಈ ಭಾವನೆಗೆ ಹಾನಿ ಸಂಭವಿಸುವ ಸಾಧ್ಯತೆಗಳನ್ನು ಕಂಡಾಗಲೆಲ್ಲಾ ಅದನ್ನು ನಿವಾರಿಸುವ ಪ್ರಯತ್ನಗಳು ನಮ್ಮೊಳಗೇನೇ ಪ್ರಾರಂಭವಾದವು. ನಮ್ಮ ಪವಿತ್ರ ಕ್ಷೇತ್ರಗಳು, ಪಾವನ ನದಿಗಳು, ರಾಷ್ಟ್ರವನ್ನು ಒಂದಾಗಿಸುವ ಇತಿಹಾಸದ ಭಾಗವಾಗಿರುವ ಪುರಾಣಗಳೆಲ್ಲವೂ ನಮ್ಮನ್ನು ಪರಸ್ಪರ ದೂರವಾಗಲು ಅವಕಾಶವನ್ನು ನೀಡಲಿಲ್ಲ. ನಮಗೆ ರಾಜನಾದವನು ರಾಷ್ಟ್ರದ ಸಂಕೇತವೆನಿಸಲೇ ಇಲ್ಲ. ಜಗತ್ತಿನ ಉಳಿದೆಡೆ ರಾಷ್ಟ್ರವೆಂದರೆ ರಾಜನೇ ಎನ್ನುವ ನಂಬಿಕೆ ಬೆಳೆಯಿತು. ಇದರಿಂದಾಗಿ ಅವನಿಗಾಗಿ ದೇಶವನ್ನು ವಿಸ್ತರಿಸುವುದು, ಅದಕ್ಕಾಗಿ ಯುದ್ಧ ಹೂಡುವುದು, ನೆತ್ತರು ಹರಿಯುವುದು ಸಾಮಾನ್ಯವೆನಿಸಿತು. ಈ ಭಾವನೆಯೇ ಜಗತ್ತಿನಲ್ಲಿ ಸದಾ ಅಶಾಂತಿಗೆ ಕಾರಣವಾಯಿತು. ನಮ್ಮ ದೇಶದಲ್ಲಿ ರಾಜರ ನಡುವೆ ಯುದ್ಧ ನಡೆಯುತ್ತಿದ್ದರೂ ಉಳಿದಂತೆ ಜನಜೀವನವು ಸಾಮಾನ್ಯ ಸ್ಥಿತಿಯಲ್ಲೇ ಮುಂದುವರಿಯುತ್ತಿದ್ದಿತು. ನಾವು ವಕೀಲರು ಜನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ನಮ್ಮದು ಒಂದು ರಾಷ್ಟ್ರವೆನ್ನುವ ಈ ಆರೋಗ್ಯಕರ ಭಾವನೆಯನ್ನು ಶಕ್ತಿಶಾಲಿಗೊಳಿಸುವ ಪ್ರಯತ್ನವನ್ನು ಮಾಡೋಣ.



ಧರ್ಮರಕ್ಷಣೆಯು ಈ ದಿನಗಳಲ್ಲಿ ಅತಿ ಅವಶ್ಯವಾಗಿ ಗಮನ ಹರಿಸಬೇಕಾದ ವಿಚಾರವಾಗಿದೆ. ವಕೀಲ ಸಮೂಹವು ಈ ವರೆಗೆ ಸಮಾಜವನ್ನು ರಕ್ಷಿಸಿದ ಉತ್ತಮ ನೀತಿ ನಿಯಮಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನೇ ಮಾಡುತ್ತಿದೆ. ಇದುವೇ ಧರ್ಮವು. ನಾವೆಲ್ಲ ನಮ್ಮ ಧರ್ಮವು ಸನಾತನವಾಗಿರಬೇಕೆಂದು ಬಯಸುತ್ತಲೇ ಬಂದವರು. ಸನಾತನವೆಂದರೆ ಪ್ರಾಚೀನವಾದುದು ಎಂದು ಮಾತ್ರ ಅರ್ಥವಲ್ಲ. ಎಂದೆಂದಿಗೂ ಸರ್ವಕಾಲಕ್ಕೂ ಅದು ರೆಲೆವೆಂಟ್–ಪ್ರಸ್ತುತವಾಗಿರುವುದು ಎಂದು ಅರ್ಥ. ಅದಕ್ಕಾಗಿ ಶಾಶ್ವತವಾದ, ಎಲ್ಲರಿಗೂ ಒಳಿತಾಗುವ ತತ್ವಗಳ ಆಧಾರದ ಮೇಲೆ ಧರ್ಮವು ವ್ಯವಸ್ಥೆಗೊಳ್ಳುವಂತೆ ಭಾರತದಲ್ಲಿ ಕಾಲಕಾಲಕ್ಕೂ ನಮ್ಮ ಸಮಾಜ ಸುಧಾರಕರು. ಋಷಿಗಳು ಪ್ರಯತ್ನಿಸುತ್ತಲೇ ಬಂದರು. ಹಾಗಾಗಿ ಒಬ್ಬ ವ್ಯಕ್ತಿಯ ಉಪದೇಶ, ಒಂದು ಪುಸ್ತಕದ ತತ್ವಗಳ ಮೇಲೆ ನಮ್ಮ ಭೂಮಿಯ ಧರ್ಮವು ಅವಲಂಬಿತವಾಗಲಿಲ್ಲ.

ನಮ್ಮ ದೇಶದಲ್ಲಿ ಧರ್ಮವು ರಿಲೀಜನ್ ಮಾತ್ರವಾಗಿ ಉಳಿಯಲಿಲ್ಲ. ಅದು ಎಲ್ಲರಿಗೂ ಸುಖಕರವಾದ ವಾತಾವರಣವನ್ನು ನಿರ್ಮಿಸಲು ನಮ್ಮನ್ನು ನಾವು ಸಿದ್ಧಪಡಿಸುವ ಜೀವನ ನಿಯಮಗಳಾದವು. ಮಹರ್ಷಿ ವ್ಯಾಸರು ರಚಿಸಿದ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡಿದ ಋಷಿಗಳು ಕೊನೆಗೂ ಅವರನ್ನು ಕೇಳಿದರಂತೆ! "ಋಷಿಗಳೇ ಧರ್ಮವನ್ನು ಬದುಕಿನ ಪ್ರತಿಕ್ಷಣದಲ್ಲೂ ಆಚರಿಸುವಂತಹ ಸುಲಭವಾದ ಧರ್ಮಸೂತ್ರವೊಂದನ್ನು ಅನುಗ್ರಹಿಸುವಿರಾ"? ಎಂದು. ಅದಕ್ಕೆ ವ್ಯಾಸರು 'ಆತ್ಮನಃ ಪ್ರತಿಕೂಲಾನಿ ನ ಪರೇಷಾಂ ಸಮಾಚರೇತ್' ನಮಗೆ ಯಾವುದು ಇಷ್ಟವಾಗದೆ ಇರುವುದೋ ಅದನ್ನು ಇತರರಿಗೆ ಮಾಡಬಾರದು – ಎಂಬ ತಿಳುವಳಿಕೆಯೇ ಧರ್ಮದ ತಿರುಳು ಎಂದರಂತೆ.



ನಮ್ಮ ಋಷಿಗಳು, ಆಚಾರ್ಯರು, ಧರ್ಮಗುರುಗಳು ಈ ರೀತಿಯ ಧರ್ಮ ಸೂತ್ರವನ್ನು ಸಮಾಜದಲ್ಲಿ ಬೇರೂರಿಸಲು ಪ್ರಯತ್ನಿಸಿದರು. ಇದೊಂದು ಚಳುವಳಿಯಾಗಬೇಕು. ಇದರ ನೇತೃತ್ವವನ್ನು ವಕೀಲ ಸಮೂಹವು ಸಹಜವಾಗಿ ವಹಿಸಲು ಸಾಧ್ಯ. ಇತಿಹಾಸದಲ್ಲಿ ಯಾವ ಯಾವುದೋ ಕಾರಣದಿಂದ ಬಂದ ಅಸ್ಪೃಶ್ಯತೆ, ಮೇಲು ಕೀಳುಭಾವನೆ, ಹಿಂದು ಸಮಾಜದ ಕಡೆಗಣನೆ, ದೇವಸ್ಥಾನಗಳ ಪಾತ್ರದ ಅವಗಣನೆಯಂತಹ ಅಪ್ರಸ್ತುತ ವಿಚಾರಗಳು ಅಳಿಯಬೇಕು. ಶುದ್ಧ ಸ್ವಚ್ಛ ಅಕಳಂಕ, ಸಮಾಜದ ನಿರ್ಮಾಣವು ಪ್ರಾಜ್ಞ ಜನರ ಗುರಿಯಾಗಬೇಕು. ಇಂತಹ ಸುಧಾರಕ ಮನೋಭಾವದ ವಕೀಲರ ಮುಂದೆ ಇಂತಹ ಸವಾಲು ಇದೆ. ನಾವೆಲ್ಲ ಈ ಆಂದೋಲನದ ವೇಗವರ್ಧಕರಾಗೋಣ.

■

# ಬಿತ್ತಿದಂತೆ ಬೆಳೆ

– **ಸಾವಿತ್ರಿ ಕರುಣಾಕರ, ಹೊಸೂರು**

ಕರ್ನಾಟಕದಲ್ಲಿ ಎಡೆಯಿಲ್ಲದೆ ನಡೆಯುತ್ತಿರುವ ಹಿಂಸಾಕೃತ್ಯಗಳನ್ನು ಗಮನಿಸಿದಾಗ ಮನಸ್ಸು ಮುದುಡಿ ಹೋಗುತ್ತದೆ. ನಮ್ಮ ರಾಜ್ಯವು ಒಂದಿಷ್ಟು ಶಾಂತಿಪ್ರಿಯ ಪ್ರದೇಶವೆನ್ನುವಂತಹ ಸ್ಥಿತಿಯು ಇದ್ದಂತಿತ್ತು. ಆದರೆ ಇತ್ತೀಚಿಗಿನ ಬೆಳವಣಿಗೆಗಳಂತೂ ಎಲ್ಲರನ್ನೂ ಗಾಬರಿಗೊಳಿಸುವಂತಿವೆ. ಕರ್ನಾಟಕದಲ್ಲಿ ಕಾನೂನು ವ್ಯವಸ್ಥೆಗೆ ಬಗ್ಗಿ ನಡೆಯುವ ಒಟ್ಟಾರೆ ಸ್ಥಿತಿಯು ಕೈಮೀರಿ ಹೋಗುತ್ತಿದೆ ಎನ್ನುವ ವಾತಾವರಣವು ಉಂಟಾಗಿದೆ.

ಕಾಲೇಜಿನ ಪ್ರಾಂಗಣದಲ್ಲಿ ವಿದ್ಯಾರ್ಥಿನಿಯೊಬ್ಬಳನ್ನು ಹದಿನೇಳು ಬಾರಿ ಚೂರಿಯಿಂದ ಇರಿದು ಕೊಂದ ಭಯಾನಕ ಘಟನೆ ಈಚೆಗೆ ನಡೆಯಿತು. ತಾನು ಪ್ರೀತಿಸಿದೆ ಎನ್ನುವಾಕೆಯನ್ನು ಒಬ್ಬ ತರುಣನು ನಿರ್ದಯವಾಗಿ ಕೊಲ್ಲುವುದು; ಅದಕ್ಕೆ ನಾಗರೀಕ ಪರಿಸರವು ಆಸ್ಪದ ಕೊಡುವುದು, ಸಾಧ್ಯವಾಗುವುದು ಕಣ್ಣ ಮುಂದೆಯೇ ನಡೆಯಿತು. ಇನ್ನೊಂದು ಕಡೆ ಪ್ರೀತಿಸಿದವಳ ತಲೆ ಕಡಿದುಕೊಂಡು ಹೋದ ಬರ್ಬರತೆಯನ್ನೂ ಕಂಡುದಾಯಿತು. ತನ್ನದೇ ಗುಂಪಿನ ತರುಣನನ್ನು ದಿನವಿಡೀ ಚಿತ್ರಹಿಂಸೆಕೊಟ್ಟು ಆತನ ಪ್ರಾಣತೆಗೆದ ತಂಡದಲ್ಲಿ ಒಬ್ಬಾಕೆ ಹೆಣ್ಣು ಮಗಳೂ ಇದ್ದಳು ಎಂದರೆ ಅಲ್ಲಿಯ ಕ್ರೌರ್ಯದ ತಾಕತ್ತು ಊಹಿಸಲೂ ಅಸಾಧ್ಯವಾಗುತ್ತದೆ.

ಲಕ್ಷಾವಧಿ ಯಹೂದಿಗಳನ್ನು ಹತ್ಯೆ ಮಾಡಿದವರು ಹತ್ತಾರು ಮಂದಿಗಳಿದ್ದ ನಾಜಿಗಳ ಗುಂಪಿನವರಲ್ಲ. ಅಂತಹವರು ಸಾವಿರಾರು ಜನರಿದ್ದರು, ಸೈನಿಕರಿದ್ದರು. ಅಪಾರ ಸಂಖ್ಯೆಯ ಸಾಮಾನ್ಯ ಜನರೂ ಇದ್ದರು. ಇವರಿಗೆಲ್ಲ ದೇಶದ ಗಡಿಯೆನ್ನುವ ಮಿತಿಯೂ ಇರಲಿಲ್ಲ. ನಾಜಿಗಳಲ್ಲದವರೂ ಈ ಹತ್ಯಾಕಾಂಡದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿದರು. ಮನುಷ್ಯನ ನಾಗರಿಕ ಪ್ರಜ್ಞೆಗೂ ನೈತಿಕ ಮುಜಗರಕ್ಕೂ ವ್ಯತಿರಿಕ್ತವಾಗಿ ನಡೆದರು. ಹಾಗೆ ನೋಡಿದರೆ ಇದಕ್ಕೆ ನಾಜಿ ಜರ್ಮನಿಯು ಮಾತ್ರ ಅಪವಾದವೆಂದು ಹೇಳುವಂತಿಲ್ಲ. ಇದು ಪಾಲೆಸ್ಟೀನಿನ ಹಮಾಸ್‌ನಿಂದಲೂ ನಡೆಯುತ್ತದೆ.


ಚಲನಚಿತ್ರಗಳಲ್ಲಿ, ದೂರದರ್ಶನದಲ್ಲಿ, ತೋರಿಸುವ ಕಾರ್ಯಕ್ರಮಗಳು ಜಗತ್ತಿನ ವಿದ್ಯಮಾನಗಳಲ್ಲಿ ಹಿಂಸೆಯು ಒಪ್ಪಿತ ಮಾರ್ಗವೆಂದೇ ಬಿಂಬಿತವಾಗುತ್ತವೆ. ಇದರ ವಿಸ್ತಾರ ಎಷ್ಟೆಂದರೆ ಒಂದೊಂದು ತಲೆಮಾರು ಕೂಡಾ ಮುಂದಿನ ತಲೆಮಾರುಗಳಿಗೆ ಹಿಂಸೆಯ ಹೊಸ ಪ್ರಕಾರವನ್ನೂ ಅದರ ಅಪರಿಮಿತಿಯನ್ನೂ ವಿಸ್ತರಿಸುತ್ತಾ ಹೋಗುತ್ತವೆ.

ಮುಂದಿನ ಪೀಳಿಗೆಗೆ ಹಿಂಸೆಯ ಕ್ರೌರ್ಯದ ಹಲವು ರೂಪಗಳನ್ನು ಕರಗತ ಮಾಡಿಸುವ ವ್ಯವಸ್ಥೆಯು ಹಲವು ರೀತಿಗಳಲ್ಲಿ ಒದಗಿ ಬರುತ್ತದೆ. ಒಂದು ಕಡೆ ಇರುವೆಯ ಸಾಲಿಗೆ ಸಕ್ಕರೆ ಸುರಿದು ಸಂತೋಷಪಡುವ ಪರಂಪರೆ ಇದೆ. ಇನ್ನೊಂದು ಕಡೆ ಶಾಲೆಯ ಬಾಲಕನ ಕೈಗೆ ಚೂರಿಯನ್ನು ಕೊಟ್ಟು ಮೇಕೆಯ ಅಣಕು ರೂಪದ ಬೊಂಬೆಯ ಶ್ವಾಸ ನಾಳವನ್ನು ಕತ್ತರಿಸುವ ತಾಲೀಮು ಕೊಟ್ಟು ನೆತ್ತರು ಸುರಿಯುವ ದೃಶ್ಯವನ್ನು ತರಗತಿಯ ಮಕ್ಕಳು ನೋಡುವಂತಹ ಆನಂದಿಸುವಂತಹ ಪರಿಸರವು ಶಾಲೆಯಲ್ಲಿದೆ.


ಹಾಗೆಂದು ಜಗತ್ತೆಲ್ಲವೂ ಹಿಂಸೆಯನ್ನೇ ಪ್ರಚೋದಿಸುತ್ತಿದೆಯೇ? ಹಿಂಸೆಯನ್ನು ಮಾತ್ರ ಆನಂದಿಸುತ್ತಿದೆಯೇ? ಹಾಗೇನಿಲ್ಲ. ರೈಲಿನ ಹಳಿಯಲ್ಲಿ ಬಿದ್ದ ಮಗುವನ್ನು ಹಳಿಗಳ ನಡುವೆ ತಳ್ಳಿ ಅದನ್ನು ಅಪ್ಪಿಕೊಂಡು ಮಗುವನ್ನು ರಕ್ಷಿಸಿದ ವ್ಯಕ್ತಿಗಳ ಚಿತ್ರಗಳನ್ನು ಕಂಡಿದ್ದೇವೆ. ಮುಳುಗುತ್ತಿರುವ ವ್ಯಕ್ತಿಯನ್ನು ರಕ್ಷಿಸಲು ನೀರಿಗೆ ಹಾರಿದವರೂ ಇದ್ದಾರೆ. ಬಸ್ಸಿನ ಚಕ್ರಕ್ಕೆ ಸಿಲುಕಲಿರುವವರನ್ನು ರಕ್ಷಿಸಿ ತಾನು ಬಲಿಯಾದ ಘಟನೆಗಳನ್ನು ನೋಡಿದ್ದೇವೆ. ಅಪಹೃತಗೊಂಡ ವಿಮಾನದ ಗಗನ ಸಖಿಯು ತೋರಿದ ಸಾಹಸವನ್ನು ಅದರಲ್ಲಿ ಆಕೆಯು ಬಲಿಯಾದ ನಿಜ ಘಟನೆಯ ಸಿನಿಮಾವೂ ಬಂದಿತ್ತು. ಉಗ್ರಗಾಮಿಗಳ ವಶದಲ್ಲಿದ್ದ ಹೋಟಲಿನ ಸಿಬ್ಬಂದಿ, ಬೆಂಕಿಬಿದ್ದ ಆಸ್ಪತ್ರೆಯ ದಾದಿಯರು ತೋರಿಸಿದ ಸಮರ್ಪಣಾ ಮನೋಭಾವವೂ ನೂರಾರಿವೆ.

ಅಂದರೆ ಸಮಾಜದಲ್ಲಿ ಕಾಣುವ ಒಳಿತಾಗಲೀ ಸಜ್ಜನಿಕೆಯಾಗಲೀ ಮಾತ್ರವೇ ಕಾಣಸಿಗುವಂತಹ ಕೃತಯುಗವು ಪ್ರತ್ಯಕ್ಷವಾಗಲು ಸಾಧ್ಯವಿಲ್ಲ. ಅದೇ ರೀತಿ ಸೈತಾನತನವೇ ತುಂಬಿರುವ ಸ್ಥಿತಿಯೂ ಇರುವುದಿಲ್ಲ. ಆಯಾ ಪರಿಸರದಲ್ಲಿ ಪ್ರಭಾವ ಬೀರುವ ಗುಂಪಿನ ಮಾನಸಿಕತೆ ಯಾವುದಿದೆಯೋ ಅದರ ವರ್ತನೆಗಳು ಅಲ್ಲಿ ಪ್ರಚಲಿತವಾಗುತ್ತದೆ.

## ಇನ್ನು ಮುಂದೆ 'ಓಂ ನಮೋ ವೆಂಕಟೇಶಾಯ' ಮಾತ್ರ



"ತಿರುಮಲದಲ್ಲಿ ಕಾಣುತ್ತಿರುವ ಭ್ರಷ್ಟಾಚಾರವನ್ನು ಸಮೂಲ ನಿರ್ನಾಮ ಮಾಡಬೇಕಾಗಿದೆ. ಈ ಪವಿತ್ರ ಧಾರ್ಮಿಕ ಕೇಂದ್ರವನ್ನು ಮದ್ಯ, ಮಾಂಸ ಮತ್ತು ಮರಿಜುವಾನಾದ ಅಡ್ಡೆಯನ್ನಾಗಿಸಲಾಗಿದೆ. ಆದುದರಿಂದ ನಮ್ಮ ಪೂರ್ಣ ನೈರ್ಮಲ್ಯದ ಕಾರ್ಯವು ತಿರುಮಲ ತಿರುಪತಿ ದೇವಸ್ಥಾನದಿಂದಲೇ ಪ್ರಾರಂಭವಾಗಲಿದೆ. ಇಲ್ಲಿ ಈಗ ಅನೇಕ ಅವ್ಯವಹಾರಗಳು ನಡೆಯುತ್ತಿವೆ. ಹಿಂದಿನ ಸರ್ಕಾರವು ಈ ಪವಿತ್ರ ಕ್ಷೇತ್ರವನ್ನು ವಾಣಿಜ್ಯೀಕರಿಸಿದೆ. ಅವೆಲ್ಲವನ್ನು ಬದಲಿಸಿ ಧರ್ಮಸ್ಥಾಪನೆಯ ಕಾರ್ಯವನ್ನು ಮಾಡಲಿದ್ದೇವೆ. ಇನ್ನೂ ಮುಂದೆ ಇಲ್ಲಿ ಕೇಳಲಿರುವ ಘೋಷಣೆಯೆಂದರೆ; 'ಓಂ ನಮೋ ವೆಂಕಟೇಶಾಯ' ಎನ್ನುವುದು ಮಾತ್ರ. ಒಳಿತನ್ನು ರಕ್ಷಿಸಿ ಕೆಡುಕನ್ನು ಶಿಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.



ಶ್ರೀ ವೆಂಕಟೇಶ್ವರನ ಪ್ರಸಾದದ ಗುಣಮಟ್ಟವು ಉತ್ತಮವಾಗಿರುತ್ತದೆ. ಪ್ರಸಾದದ ಬೆಲೆಯು ಹೆಚ್ಚಾಗಬಾರದು. ದೇವದರ್ಶನದ ಟಿಕೇಟುಗಳು ಕಾಳಸಂತೆಯಲ್ಲಿ ಮಾರುವುದಾಗಬಾರದು. ಹೊಸ ಸರ್ಕಾರವು ಭ್ರಷ್ಟಾಚಾರವನ್ನು ಸಮಾಜ ದ್ರೋಹಿ ಕಾರ್ಯಗಳನ್ನು ಸಹಿಸದು. ನಮ್ಮ ಕುಟುಂಬವು ತಿರುಮಲ ವೆಂಕಟೇಶ್ವರನ ಭಕ್ತರು. ನಾನು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ವೆಂಕಟೇಶ್ವರನ ಕೃಪೆಯನ್ನು ಬೇಡುವವನು. ನನ್ನ ಮೇಲೆ ನಕ್ಸಲರ ದಾಳಿಯಾದಾಗ ನನ್ನನ್ನು ರಕ್ಷಿಸಿದವನು ಶ್ರೀವೆಂಕಟೇಶ್ವರ ಸ್ವಾಮಿಯೇ. – ***ಮುಖ್ಯ ಮಂತ್ರಿಯಾಗಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುತ್ತಲೇ; ತಿರುಪತಿ ತಿರುಮಲ ದರ್ಶನಕ್ಕೆ ತೆರಳಿದ ಚಂದ್ರಬಾಬು ನಾಯ್ಡು ಹೇಳಿಕೆ***

# ವಿಶೇಷ ವಿವಾಹ ಕಾಯಿದೆ: ಮುಸ್ಲಿಮ್ ಪುರುಷನೊಡನೆ ಹಿಂದು ಹೆಣ್ಣು ಮಗಳ ವಿವಾಹ ಅಸಿಂಧು




ವಿಶೇಷ ವಿವಾಹ ಕಾಯಿದೆಯ ಮೂಲಕ ವಿವಾಹ ನೋಂದಣಿ ಮಾಡುವ ಅಧಿಕಾರಿಯ ಮುಂದೆ ಹಾಜರಾಗಲು ಹಿಂದು ಮಹಿಳೆಯೊಬ್ಬಳು ಪೋಲಿಸ್ ರಕ್ಷಣೆಗಾಗಿ ಕೇಳಿದ ಮನವಿಯನ್ನು ಮಧ್ಯಪ್ರದೇಶದ ಉಚ್ಚನ್ಯಾಯಾಲಯವು ನಿರಾಕರಿಸಿದೆ.

ನ್ಯಾಯಮೂರ್ತಿ ಗುರುಪಾಲ್ ಸಿಂಗ್ ಅಹ್ಲುವಾಲಿಯಾ "ಮುಸ್ಲಿಂ ಪುರುಷ ಮತ್ತು ಹಿಂದು ಮಹಿಳೆಯ ವಿವಾಹವು, ಮುಸ್ಲಿಂ ಕಾನೂನು ಪ್ರಕಾರ ಅಕ್ಷಮ್ಯ (ಫಸಾದ್) ವಾದುದಷ್ಟೇ ಅಲ್ಲ; ವಿಶೇಷ ವಿವಾಹಕಾಯಿದೆಯ ಪ್ರಕಾರವೂ ಸಕ್ರಮವಾಗದು ಎಂದು ಅಭಿಪ್ರಾಯಪಟ್ಟರು.

1954ರ ವಿಶೇಷ ವಿವಾಹ ಕಾಯಿದೆಯಂತೆ ಅಂತರ್ಧರ್ಮೀಯ ಮದುವೆಯ ನೊಂದಣಿಗಾಗಿ ಪೊಲೀಸ್ ರಕ್ಷಣೆಯನ್ನು ನೀಡಲು ನ್ಯಾಯಾಲಯವು ನಿರಾಕರಿಸಿತು. ಮಹಮ್ಮದನ್ ಕಾನೂನಿನಂತೆ ಮೂರ್ತಿ ಪೂಜಕಳೋ ಅಥವಾ ಅಗ್ನಿಪೂಜಕಳೋ ಆಗಿದ್ದ ಮಹಿಳೆಯೊಡನೆ ಮುಸ್ಲಿಂ ಪುರುಷನ ಮದುವೆಯು ಸಕ್ರಮವಲ್ಲ ಎನ್ನುವುದು ನ್ಯಾಯಾಲಯದ ತೀರ್ಮಾನ.


ದೂರು ನೀಡಿದ ಮಹಿಳೆಯ ಕುಟುಂಬವು ಈ ವಿವಾಹವನ್ನು ವಿರೋಧಿಸಿದ್ದಿತು. ಅವರು ಹೇಳುವಂತೆ ಈ ಮಹಿಳೆಯು ಮುಸ್ಲಿಮನೊಡನೆ ಮದುವೆಯಾಗುವ ಉದ್ದೇಶದಿಂದ ಮನೆಯಿಂದ ಆಭರಣಗಳನ್ನು ಕೊಂಡೊಯ್ದಿದ್ದಳು.

ಆಕೆಯ ವಕೀಲರು ವಾದಿಸುವಂತೆ ಮುಸ್ಲಿಂ ವೈಯಕ್ತಿಕ ಕಾನೂನು ಈ ವಿವಾಹವನ್ನು ಒಪ್ಪದಿರಬಹುದು ಆದರೆ ವಿಶೇಷ ವಿವಾಹ ಕಾಯಿದೆಯು ಅದನ್ನು ಪುರಸ್ಕರಿಸುತ್ತದೆ. ಈ ಕಾಯಿದೆಯು ವೈಯಕ್ತಿಕ ಕಾನೂನನ್ನು ಮೀರಿ ವಿವಾಹವನ್ನು ಊರ್ಜಿತಗೊಳಿಸುತ್ತದೆ ಎಂದು ವಾದಿಸಿದ್ದರು.

ಆದರೆ ನ್ಯಾಯಾಧೀಶರು 'ವೈಯಕ್ತಿಕ ಕಾನೂನು ಅಸಿಂಧುವೆನ್ನುವ ವಿವಾಹವನ್ನು ವಿಶೇಷ ವಿವಾಹ ಕಾನೂನು ಸಿಂಧುವಾಗಿಸದು. ವಿಶೇಷ ವಿವಾಹಕಾಯಿದೆಯ 4ನೇ ಸೆಕ್ಷನ್ ವಧೂ ವರರು ನಿಷೇಧಿತ ಸಂಬಂಧವನ್ನು ಹೊಂದದೆ ಇದ್ದು ವಿವಾಹವಾಗುವುದಾದರೆ ಮಾತ್ರವೇ ಅಂತಹ ವಿವಾಹವೇ ಸಿಂಧುವಾಗುತ್ತದೆ ಎಂದು ಸಾರುತ್ತದೆ. ಮಹಿಳೆಯು ಮುಸ್ಲಿಮ್ ಆಗಿ ಮತಾಂತರಗೊಳ್ಳಲು ಒಪ್ಪದೆ ಇರುವುದರಿಂದ ಈ ಮನವಿಯನ್ನು ವಜಾಗೊಳಿಸಲಾಗಿದೆ. ಮತ್ತು ನ್ಯಾಯಾಲಯವು ಇಲ್ಲಿ ಮಧ್ಯಪ್ರವೇಶಿಸಲು ಇಚ್ಛೈಪಡದು ಎಂದರು.

# ಅಮೆರಿಕದಲ್ಲಿ ವಿವೇಕಾನಂದರ ಮೊದಲ ಭಾಷಣ

– ಬಿ. ಇ. ಸೀತಾಲಕ್ಷ್ಮೀ




ಹೋದ ತಿಂಗಳು ನನಗೆ ಬೋಸ್ಟನ್ ನಗರಕ್ಕೆ ಭೇಟಿ ನೀಡುವ ಅವಕಾಶ ಒದಗಿತು. ಬಾಸ್ಟನ್ ಮೆಸ್ಸಾಚುಸೆಟ್ಸ್ ರಾಜ್ಯದ ರಾಜಧಾನಿ ಹಾಗೂ ಒಂದು ಸಾಂಸ್ಕೃತಿಕ ಮತ್ತು ಆರ್ಥಿಕ ನಗರಿ. ಇದು ಒಂದು ಪ್ರಾಚೀನ ನಗರಿಯಾಗಿದ್ದು ಅಟ್ಲಾಂಟಿಕ್ ಮಹಾಸಾಗರದ ದಂಡೆಯ ಮೇಲಿದೆ. ಈ ನಗರಕ್ಕೂ ವಿವೇಕಾನಂದರಿಗೂ ವಿಶೇಷ ನಂಟು ಇದೆ.

ಈ ಪ್ರವಾಸದಲ್ಲಿ ನನಗೆ ಬಹಳ ವಿಶೇಷ ಎನಿಸಿದ್ದು ಹಾಗು ಅಪೂರ್ವ ಸಂತಸ ತಂದಿದ್ದು ಇಲ್ಲಿ ನಾನು ಭೇಟಿ ಕೊಟ್ಟ ಅನಿಸ್ಕ್ವಾಮ್ ವಿಲೇಜ್ ಚರ್ಚ್.ಇದರ ಜೊತೆ ನಮಗೆ, ನಿಮಗೆ ಅಷ್ಟೇ ಏಕೆ ಸಂಪೂರ್ಣ ಭಾರತಕ್ಕೆಲ್ಲ ಒಂದು ವಿಶೇಷ ಸಂಬಂಧವಿದೆ. 25 ಬೆಳಿಗ್ಗೆ 11.30ಕ್ಕೆ ನಾವಿದ್ದ ಸ್ಥಳದಿಂದ ಎರಡು ಗಂಟೆಗಳ ಕಾಲ ಪ್ರಯಾಣ ಮಾಡಿ ಈ ಚರ್ಚ್ ಬಳಿ ಬಂದೆವು. ಇದು ಅಟ್ಲಾಂಟಿಕ್ ಸಾಗರದ ಬಳಿಯ ಗ್ಲೌಸೆಸ್ಟರ್ ಎಂಬ ನಗರದ ಒಂದು ಸಣ್ಣ ಹಳ್ಳಿಯಲ್ಲಿದೆ.

ಈ ಚರ್ಚ್‌ನ ವಿಶೇಷತೆ ಏನು ಎಂದು ಚಿಂತಿಸುತ್ತಾ ಇರುವಿರಾ? ಇದಕ್ಕೂ ನಮ್ಮ ಸ್ವಾಮಿ ವಿವೇಕಾನಂದರಿಗೂ ಅವಿನಾಭಾವ ಸಂಬಂಧವಿದೆ. 1893 ರಲ್ಲಿ ಚಿಕಾಗೋ ನಗರದಲ್ಲಿ ನಡೆಯಲಿದ್ದ ಸರ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ವಿವೇಕಾನಂದರು ಆ ನಗರಕ್ಕೆ ಹಡಗಿನಲ್ಲಿ 1893 ರ ಜುಲೈ ಮಧ್ಯದಲ್ಲಿ ಬಂದರು. ಆದರೆ ಸಮ್ಮೇಳನ ನಡೆಯಲಿದ್ದುದು ಸೆಪ್ಟೆಂಬರ್ ತಿಂಗಳಲ್ಲಿ. ಇನ್ನೂ ಮೂರು ತಿಂಗಳ ಸಮಯ ಬಾಕಿಯಿತ್ತು.

ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಮೊದಲೇ ನೋಂದಾವಣೆ ಮಾಡಿಸಬೇಕಿತ್ತು. ಆ ಸಮಯವೂ ಮೀರಿ ಹೋಗಿತ್ತು. ಜೊತೆಗೆ ಒಂದು ಅರ್ಹತಾ ಪತ್ರವೋ, ಪರಿಚಯ ಪತ್ರವೋ ಇರಬೇಕಿತ್ತು. ಕೈಯಲ್ಲಿದ್ದ ಹಣವೂ ಕರಗುತ್ತಾ ಬಂತು. ಏನೇ ತೊಂದರೆ ಇದ್ದರೂ ಗುರುಗಳಾದ ರಾಮಕೃಷ್ಣ ಪರಮಹಂಸರು ತಮ್ಮನ್ನು ಪೊರೆಯುವರೆಂಬ ನಂಬಿಕೆ ವಿವೇಕಾನಂದರಿಗೆ ಇತ್ತು. ಅತಿ ದೊಡ್ಡ ನಗರವಾದ ಚಿಕಾಗೋದಲ್ಲಿ ಖರ್ಚು ಹೆಚ್ಚು, ಸಣ್ಣ ಊರಾದ ಬಾಸ್ಟನ್ ನಗರದಲ್ಲಿ ಜೀವನ ಸುಲಭವೆಂದು ತಿಳಿದ ಅವರು ರೈಲಿನಲ್ಲಿ ಈ ನಗರಕ್ಕೆ ಬಂದರು. ಬಾಸ್ಟನ್‌ನಲ್ಲಿ ಮಿಸ್. ಕೇಟ್ ಸ್ಯಾನ್ ಬರ್ನ್ ಎಂಬ ಮಹಿಳೆ ಅವರಿಗೆ ಆಶ್ರಯ ನೀಡಿದಳು. ಆಕೆಯು ಅವರಿಗೆ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಗ್ರೀಕ್ ಭಾಷೆಯ ಪ್ರಸಿದ್ಧ ಪ್ರೊಫೆಸರ್ ಆಗಿದ್ದ ಜಾನ್ ರೈಟ್ ಎಂಬುವರಿಗೆ ಪರಿಚಯ ಮಾಡಿಸಿದಳು. ಅವರ ಆಹ್ವಾನದ ಮೇರೆಗೆ ವಿವೇಕಾನಂದರು 1893 ರ ಆಗಸ್ಟ್ 25 ರಂದು ಈ ಅನ್ನಿಸ್ಕ್ವಾಮ್ ಎಂಬ ಸ್ಥಳಕ್ಕೆ ಆಗಮಿಸಿದರು. ಇದು ಬಾಸ್ಟನ್ ನಿಂದ 40 ಮೈಲು ದೂರವಿದೆ.




ಊರಿಗೆ ಪರಿಚಯವೇ ಇಲ್ಲದ ಹೊಸಬರಾದರೂ ವಿವೇಕಾನಂದರ ಸುಂದರ ರೂಪ, ಹೊಳೆಯುವ ಕಣ್ಣುಗಳು, ಆಕರ್ಷಕವಾಗಿ ಮಾತಾಡುವ ಶೈಲಿ, ಪಾಶ್ಚಾತ್ಯ ಶಾಸ್ತ್ರ ಪರಿಚಯ ಮತ್ತು ಭಾರತೀಯ ವೇದಾಂತ ಜ್ಞಾನ ಹಾಗೂ ತಿಳುವಳಿಕೆ ಅಲ್ಲಿನ ಜನರನ್ನು ಆಕರ್ಷಿಸಿದವು.ಇವರ ಮಾತಿನ ಮೋಡಿಗೆ ಜನ ಮಂತ್ರ ಮುಗ್ಧರಾದರು. ಅಲ್ಲಿನ ಜನರ ಪ್ರಾರ್ಥನೆಯಂತೆ ವಿವೇಕಾನಂದರು ನಾನು ಮೊದಲೇ ತಿಳಿಸಿದ ಚರ್ಚ್‌ನಲ್ಲಿ ಆಗಸ್ಟ್ 27 ರ ಭಾನುವಾರ ಸಂಜೆ 'ಭಾರತೀಯ ಜೀವನ ಪದ್ಧತಿ' ಎಂಬ ವಿಷಯದ ಬಗ್ಗೆ ಭಾಷಣ ನೀಡಿದರು. ಇದು ಅಮೆರಿಕಾ ನೆಲದಲ್ಲಿ ಅವರ ಮೊಟ್ಟಮೊದಲ ಸಾರ್ವಜನಿಕ ಭಾಷಣವಾಗಿತ್ತು.

ಇವರ ಪಾಂಡಿತ್ಯ ಮತ್ತು ವಾಕ್ಚಾತುರ್ಯದಿಂದ ಅತ್ಯಂತ ಪ್ರಭಾವಿತರಾದ ಪ್ರೊ. ರೈಟ್ ರವರು ಮುಂದೆ ನಡೆಯಲಿದ್ದ ವಿಶ್ವ ಸಮ್ಮೇಳನದ ನಿರ್ದೇಶಕರು ಹಾಗೂ ತಮ್ಮ ಸ್ನೇಹಿತರೂ ಆಗಿದ್ದವರಿಗೆ ಸ್ವಾಮೀಜಿಯವರ ಬಗ್ಗೆ ಬರೆದ ಪರಿಚಯ ಪತ್ರವನ್ನು ಕೊಟ್ಟರು. ಆ ಪತ್ರದ ಕಡೆಯಲ್ಲಿ 'ನಮ್ಮ ಮೇಧಾವಿಗಳಾದ ಎಲ್ಲ ಪ್ರೊಫೆಸರ್‌ಗಳನ್ನೂ ಒಟ್ಟುಗೂಡಿಸಿದರೆ ಅವರೆಲ್ಲರನ್ನು ಬುದ್ಧಿ ಶಕ್ತಿಯಲ್ಲಿ ಮೀರಿಸುವವರು ಇವರು' ಎಂದು ಬರೆದಿದ್ದರು. ಆಗಸ್ಟ್ 28 ರಂದು ಸ್ವಾಮೀಜಿ ಇಲ್ಲಿಂದ ಹೊರಟರು. ಮುಂದೆ 1893 ಸೆಪ್ಟೆಂಬರ್ ತಿಂಗಳ 11ನೇ ತಾರೀಖು ಸ್ವಾಮೀಜಿಯವರು ವಿಶ್ವ ಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣ ಪ್ರಪಂಚದಲ್ಲೇ ಪ್ರಸಿದ್ಧಿ ಪಡೆದು ನಮ್ಮ ದೇಶಕ್ಕೆ ಹೆಮ್ಮೆ ಹಾಗೂ ಕೀರ್ತಿಯನ್ನು ತಂದಿದ್ದು ಮರೆಯಲಾಗದ ಇತಿಹಾಸ. ಅಲ್ಲಿಯ ವರೆಗೂ ಅನಾಮಿಕರಾಗಿದ್ದ ಸ್ವಾಮಿ ವಿವೇಕಾನಂದರು ಜಗದ್ಗುರುವಾಗಿ ಬಿಟ್ಟರು. ಅಲ್ಲಿನ ಆ ಸ್ಥಳವನ್ನು ನಾನು ಮೊದಲು ಬಂದಾಗ 2018 ರಲ್ಲಿ ಕಂಡು ಪುನೀತಳಾಗಿದ್ದೆ. ಈಗ ಅವರು ಇಲ್ಲಿ ಮೊಟ್ಟಮೊದಲು ಭಾಷಣ ನೀಡಿದ ಸ್ಥಳವನ್ನು ಕಾಣುವ ಸೌಭಾಗ್ಯ ಕೂಡಿ ಬಂದದ್ದು ಖಂಡಿತ ಭಗವಂತನ ದಯೆ ಎಂದು ನಂಬಿರುವೆ. ಆ ಚರ್ಚ್‌ನ ಹೊರಗೆ, ಒಳಗೆ ಎಲ್ಲಾ ಸಂಭ್ರಮದಿಂದ ಓಡಾಡಿ ಫೋಟೋ ಕ್ಲಿಕ್ಕಿಸಿಕೊಂಡು ಧನ್ಯರಾದೆವು.

■

ಹಿಂದುವಾಣಿಗೆ ಚಂದಾದಾರರಾಗಲು

ವಾರ್ಷಿಕ ಚಂದಾ ರೂ. 130/- ಅಥವಾ ದ್ವೈವಾರ್ಷಿಕ ಚಂದಾ ರೂ. 250/-ರ
ಎಂ.ಓ./ಡಿ.ಡಿ.ಗಳನ್ನು "ಹಿಂದುವಾಣಿ" ಹೆಸರಿನಲ್ಲಿ ಕಳುಹಿಸಬಹುದು
ಅಥವಾ
ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.
ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ
ವರ್ಗಾಯಿಸಬಹುದು.
I.F.S.C Code : KARB0000058
ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080-26604641ಕ್ಕೆ
ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.

# ಅಷ್ಟಾವಕ್ರ

ಅಷ್ಟಾವಕ್ರರು ಕಹೋಡಮಹರ್ಷಿಗಳ ಪುತ್ರರು. ಕಹೋಡರು ಜಿತೇಂದ್ರಿಯರೂ ಗುರುಶುಶ್ರೂಷಾಪರಾಯಣರೂ ಆಗಿದ್ದರು. ಅವರ ಸದ್ಗುಣಗಳಿಂದ ಸುಪ್ರೀತರಾದ ಗುರು ಉದ್ದಾಲಕರು ತಮ್ಮ ಮಗಳಾದ ಸುಜಾತೆಯನ್ನು ಕಹೋಡರಿಗೆ ವಿವಾಹ ಮಾಡಿಕೊಟ್ಟರು. ಕಾಲಕ್ರಮದಲ್ಲಿ ಸುಜಾತೆ ಗರ್ಭಿಣಿಯಾದಳು.

ಒಂದಾನೊಂದು ದಿನ ಗರ್ಭದಲ್ಲಿದ್ದ ಶಿಶುವು ತಂದೆಯ ವೇದಾಧ್ಯಯನದಲ್ಲಿ ತಪ್ಪನ್ನು ಕಂಡುಹಿಡಿದು ನಕ್ಕುಬಿಟ್ಟಿತು. ಕಹೋಡರಿಗೆ ಇದರಿಂದ ಕೋಪಬಂದು, “ನಿನ್ನ ದೇಹದ ಎಂಟು ಭಾಗಗಳಲ್ಲಿ ವಕ್ರತೆಯುಂಟಾಗಲಿ” ಎಂದು ಶಪಿಸಿದರು. ಇದರಿಂದಾಗಿ ವಕ್ರನಾಗಿ ಜನಿಸಿದ ಶಿಶುವು, ‘ಅಷ್ಟಾವಕ್ರ’ನೆಂದೇ ಪ್ರಸಿದ್ಧವಾಯಿತು.

ಮಗುವು ಜನಿಸುವ ಮೊದಲೇ ಕಹೋಡರು ಜನಕನ ಆಸ್ಥಾನದಲ್ಲಿದ್ದ ವಂದಿಯೆಂಬ ಮಹಾಪಂಡಿತನೊಡನೆ ವಾದಮಾಡಲು ಹೋದರು. ಅವರನ್ನು ಜಯಿಸಿದ ವಂದಿಯು ಕಹೋಡರನ್ನು ನೀರಿಗೆ ತಳ್ಳಿಸಿಬಿಟ್ಟನು. ಹೀಗಾಗಿ ಮಗುವಿಗೆ ತಂದೆಯ ವಿಷಯವಾಗಿ ಏನೂ ತಿಳಿದಿರಲಿಲ್ಲ. ಅಷ್ಟಾವಕ್ರನು, ಉದ್ದಾಲಕರನ್ನೇ ‘ತಂದೆ’ ಎಂದು ಸಂಬೋಧಿಸುತ್ತ ಅವರಿಂದ ಎಲ್ಲ ಶಿಕ್ಷಣವನ್ನು ಪಡೆದನು.

ಒಂದು ದಿನ ಅಷ್ಟಾವಕ್ರನು ಉದ್ದಾಲಕರ ತೊಡೆಯ ಮೇಲೆ ಕುಳಿತು ಶಾಸ್ತ್ರಾರ್ಥವನ್ನು ಚರ್ಚಿಸುತ್ತಿದ್ದನು. ಉದ್ದಾಲಕರ ಮಗನಾದ ಶ್ವೇತಕೇತುವಿಗೆ ಇದು ಸಹ್ಯವಾಗಲಿಲ್ಲ. ಅವನು, “ಅಷ್ಟಾವಕ್ರ, ನನ್ನ ತಂದೆಯ ತೊಡೆಯ ಮೇಲೆ ನಾನು ಕುಳಿತುಕೊಳ್ಳಬೇಕು. ನೀನು ಎದ್ದು ಹೋಗು” ಎಂದು ಅವನ ಕೈಹಿಡಿದು ಎಳೆದನು. ಅಷ್ಟಾವಕ್ರನು ಅಳುತ್ತ ತಾಯಿಯ ಬಳಿಗೆ ಹೋಗಿ “ನನ್ನ ತಂದೆ ಎಲ್ಲಮ್ಮಾ?” ಎಂದು ಪ್ರಶ್ನಿಸುತ್ತಾ ಸುಜಾತೆಗೆ ನಡೆದ ವಿಷಯವನ್ನು ಹೇಳಿದನು. ದುಃಖಿತಳಾದ ಸುಜಾತೆಯು ಮಗನಿಗೆ ತನ್ನ ಪತಿಯ ವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದಳು.

ಹನ್ನೆರಡು ವರುಷದ ಬಾಲಕ ಅಷ್ಟಾವಕ್ರನಿಗೆ ತಂದೆಯ ಸೋಲಿಗೆ ಪ್ರತೀಕಾರ ಮಾಡಬೇಕೆನಿಸಿತು. ಸೋದರಮಾವನಾದ ಶ್ವೇತಕೇತುವನ್ನು ಕುರಿತು, “ಜನಕರಾಜನ ಆಸ್ಥಾನವು ಅತ್ಯಾಶ್ಚರ್ಯಮಯ ಸಂಗತಿಗಳಿಂದ ಕೂಡಿರುವುದೆಂದು ಕೇಳಿದ್ದೇನೆ. ಅದನ್ನೆಲ್ಲ ನೋಡಬೇಕೆಂದು ನನಗೆ ಇಚ್ಛೆಯಾಗಿದೆ. ನಾವಿಬ್ಬರೂ ಹೋಗಿ ವಿದ್ವಾಂಸರು ಶಾಸ್ತ್ರಾರ್ಥಗಳ ಮೇಲೆ ಮಾಡುವ ವಾಗ್ವಾದಗಳ ಸರಣಿಯನ್ನು ಕೇಳಿ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳೋಣ. ರಾಜಭೋಜನದಲ್ಲಿ ಪಾಲ್ಗೊಂಡು ಸಂತೋಷಪಡೋಣ” ಎಂದು ಹೇಳಿದನು. ಅಷ್ಟಾವಕ್ರನ ಮಾತಿಗೆ ಶ್ವೇತಕೇತುವೂ ಒಪ್ಪಿದನು. ಇಬ್ಬರೂ ಜನಕನ ರಾಜಧಾನಿಯಾದ ಮಿಥಿಲೆಗೆ ಪ್ರಯಾಣ ಮಾಡಿದರು.

ಇಬ್ಬರೂ ಹೊರಟು, ಅತ್ಯಂತ ಶೋಭಾಯಮಾನವಾಗಿದ್ದ ಮತ್ತು ಸಮೃದ್ಧವಾಗಿದ್ದ ಜನಕನ ಯಜ್ಞಶಾಲೆಯ ಮಹಾದ್ವಾರದ ಬಳಿಗೆ ಬಂದರು. ಅಷ್ಟುಹೊತ್ತಿಗೆ

ಮಹಾರಾಜನೂ ಅಲ್ಲಿಗೆ ಬಂದನು. ಸೇವಕರು, ರಾಜನಿಗೆ ದಾರಿಬಿಡುವಂತೆ ಎಲ್ಲರಿಗೂ ಆದೇಶಿಸುತ್ತಿದ್ದರು. ಆಗ ಅಷ್ಟಾವಕ್ರನು ರಾಜನನ್ನು ಕುರಿತು "ಮಹಾರಾಜ! ಕುರುಡರು. ಕಿವುಡರು, ಸ್ತ್ರೀಯರು, ದೊಡ್ಡದಾದ ಹೊರೆಯನ್ನು ಹೊತ್ತಿರುವವರು, ಮುಂತಾದವರಿಗೆ ಮೊದಲು ಹಾದಿಯನ್ನು ಬಿಟ್ಟುಕೊಡಬೇಕು. ಮಹಾರಾಜನು ಎದುರಾಗಿ ಬಂದರೆ ಅವನಿಗೆ ಗೌರವದಿಂದ ಹಾದಿಯನ್ನು ಬಿಟ್ಟುಕೊಡಬೇಕೆಂಬುದೇನೋ ನಿಜ. ಆದರೆ ನನ್ನಂತಹ ವಿದ್ವಾಂಸನೊಬ್ಬನು ಎದುರಾಗಿ ಬಂದರೆ ರಾಜನೂ ಅವನಿಗೆ ಹಾದಿಯನ್ನು ಬಿಟ್ಟು ಕೊಡಬೇಕು. ನಾನು ವಂದಿಯನ್ನು ಕಂಡು ಅವನೊಡನೆ ವಾದಮಾಡುವುದಕ್ಕೆಂದೇ ಇಲ್ಲಿಗೆ ಬಂದಿರುತ್ತೇನೆ" ಎಂದನು.

ಆಗ ಅಲ್ಲಿದ್ದ ರಾಜನು, "ವಂದಿಯನ್ನು ವೇದವೇದಾಂತಪಾರಂಗತರಾದ ವಿದ್ವಾಂಸರೇ ಎದುರಿಸಲಾರದೇ ಸೋಲನ್ನೊಪ್ಪಿಕೊಂಡಿರುತ್ತಾರೆ. ನೀನಿನ್ನೂ ಬಾಲಕನು. ಈ ಸಾಹಸ ಬೇಡ" ಎಂದನು. ಆಗ ಅಷ್ಟಾವಕ್ರನು, "ಮಹಾರಾಜ! ನಾನು ಬ್ರಹ್ಮಾದ್ವೈತದ ವಿಚಾರವಾಗಿ ವಂದಿಯೊಡನೆ ತರ್ಕ ಮಾಡಲು ಬಂದಿರುತ್ತೇನೆ. ಸೂರ್ಯನು ಉದಯಿಸಿದೊಡನೆಯೇ ಮಿನುಗುವ ನಕ್ಷತ್ರಗಳೂ ಮಂಕಾಗುವಂತೆ ನಾನು ಅವನ ಸೊಕ್ಕನ್ನು ಮುರಿಯುತ್ತೇನೆ" ಎಂದನು. ಜನಕನಿಗೆ ಆಶ್ಚರ್ಯವಾಯಿತು. ಅದನ್ನು ತೋರ್ಪಡಿಸದೆಯೇ ಮತ್ತೆ ಹೇಳಿದನು: "ನೀನು ಪ್ರತಿಕಕ್ಷಿಯ ವಾಗ್ಬಲವನ್ನು ತಿಳಿಯದೆಯೇ ಮಾತನಾಡುತ್ತಿರುವೆ. ಇದುವರೆಗೂ ಅನೇಕರು ನಿನ್ನಂತೆಯೇ ಆರ್ಭಟಿಸುತ್ತ ಬಂದು, ವಂದಿಯಿಂದ ಪರಾಜಿತರಾದರು. ಆದುದರಿಂದ, ವಂದಿಯೊಂದಿಗೆ ವಾದಿಸುವ ವಿಷಯವನ್ನು ಸರಿಯಾಗಿ ಆಲೋಚಿಸು" ಎಂದನು.

ಅಷ್ಟಾವಕ್ರನ ವಿಶ್ವಾಸ ದೃಢವಾದುದು. "ಇದುವರೆಗೆ ಆತನು ನನ್ನಂತಹವನನ್ನು ಸಂಧಿಸದೇ ಇರುವುದೇ ಅವನ ಸೊಕ್ಕಿಗೆ ಕಾರಣವಾಗಿದೆ. ಇಂದು ನನ್ನೊಡನೆ ವಾದ ಮಾಡಿ, ಅಚ್ಚುಮುರಿದ ಗಾಡಿಯಂತೆ ಸ್ತಬ್ಧನಾಗುತ್ತಾನೆ" ಎಂದು ಹೇಳಿದನು. ರಾಜನಿಗೆ 'ಇವನನ್ನೊಮ್ಮೆ ಪರೀಕ್ಷಿಸಬೇಕು' ಎನಿಸಿತು. ಅವನೊಂದು ಸಮಸ್ಯೆಯನ್ನು ನೀಡಿದನು.

"ಮೂವತ್ತು ಅಂಶಗಳನ್ನೂ ಹನ್ನೆರಡು ವಿಭಾಗಗಳನ್ನೂ ಇಪ್ಪತ್ತನಾಲ್ಕು ಪರ್ವಗಳನ್ನೂ ಮತ್ತು ಮೂರುನೂರಾ ಅರವತ್ತು ಕಾಲುಗಳನ್ನೂ ಹೊಂದಿರುವ ಒಂದೇ ಒಂದು ಸಂಗತಿ ಯಾವುದು?"

ರಾಜನು ಮತ್ತೆ ಮುಂದುವರಿದು "ಯಾವ ಪ್ರಾಣಿಯು ನಿದ್ರಿಸುವಾಗಲೂ ಕಣ್ಣು ಮುಚ್ಚುವುದಿಲ್ಲ? ಹುಟ್ಟಿದ ಮೇಲೂ ಚಲಿಸದ ವಸ್ತು ಯಾವುದು? ಯಾವುದಕ್ಕೆ ಹೃದಯವಿಲ್ಲ? ವೇಗದಿಂದಲೇ ವರ್ಧಿಸುವುದು ಯಾವುದು?" ಎಂದು ಕೇಳಿದನು.

ರಾಜ ಕೇಳಿದ ಹೊಸ ಪ್ರಶ್ನೆಗೂ ಅಷ್ಟಾವಕ್ರ ಸಮಾಧಾನದಿಂದಲೇ ಉತ್ತರಿಸಿದನು: "ಮೀನು ನಿದ್ರಿಸುವಾಗಲೂ ಕಣ್ಣು ಮುಚ್ಚುವುದಿಲ್ಲ; ಮೊಟ್ಟೆ ಚಲಿಸುವುದಿಲ್ಲ; ಕಲ್ಲಿಗೆ ಹೃದಯವಿಲ್ಲ: ನದಿಯ ಪ್ರವಾಹ ವೇಗದಿಂದ ವರ್ಧಿಸುತ್ತದೆ. ವೇದಾಂತಪರವಾಗಿ ಹೇಳುವುದಾದರೆ, ಚಿದ್ರೂಪನಾದ ಪರಮಾತ್ಮನು ನಿದ್ರಿಸುವಾಗಲೂ ಜೀವಿಗಳಲ್ಲಿ ಎಚ್ಚರವಾಗಿರುತ್ತಾನೆ; ಬ್ರಹ್ಮಾಂಡವು ಚಲಿಸುವುದಿಲ್ಲ; ಶರೀರವು ಇಲ್ಲದವನಿಗೆ ಹೃದಯದ ಸಂಬಂಧವಿಲ್ಲ;

ಚಿತ್ತವೆಂಬ ನದಿಯು ಯೋಗಿಯಲ್ಲಿ ಸಮಾಧಿಯ ಕಡೆಗೆ ವೇಗದಿಂದ ಧಾವಿಸುತ್ತದೆ" ಎಂದನು.

ಅಷ್ಟಾವಕ್ರನು ನೀಡಿದ ಉತ್ತರಗಳಿಂದ ಸಂತುಷ್ಟನಾದ ರಾಜನು ಅವನಿಗೆ ಸಭೆಯನ್ನು ಪ್ರವೇಶಿಸಲು ಅನುಮತಿಯನ್ನಿತ್ತನು. ಅಷ್ಟಾವಕ್ರನು ಶ್ವೇತಕೇತುವಿನೊಂದಿಗೆ ಸಭೆಯನ್ನು ಪ್ರವೇಶಿಸಿದರು. ನೇರವಾಗಿ ವಂದಿಯೊಡನೆ ವಾಕ್ಯಾರ್ಥ ಆರಂಭಿಸಿದನು. ವಂದಿಯು 'ಒಂದು' ಎಂಬ ಸಂಖ್ಯೆಯನ್ನು ತೆಗೆದುಕೊಂಡು ಅದರ ಪ್ರಾಮುಖ್ಯವನ್ನು ಹೇಳಿದನು. ಆಗ ಅಷ್ಟಾವಕ್ರನು 'ಎರಡು' ಸಂಖ್ಯೆಯ ಪ್ರಾಮುಖ್ಯವನ್ನು ವಿವರಿಸಿದನು. ಹೀಗೆ ಮುಂದುವರಿಯುತ್ತ 'ಹನ್ನೆರಡು' ಎಂಬ ಸಂಖ್ಯೆಯುವರೆಗೆ ಬಂದರು. 'ಹದಿಮೂರು' ಎಂಬ ಸಂಖ್ಯೆಯ ಪ್ರಾಶಸ್ತ್ಯವನ್ನು ಕುರಿತು ಪ್ರಾರಂಭಿಸಿದ ವಂದಿಯು, ""ಶುಕ್ಲಪಕ್ಷದ ತ್ರಯೋದಶಿ ಬಹಳ ಪ್ರಶಸ್ತವಾದುದು. ಪ್ರಪಂಚವು ಹದಿಮೂರು ದ್ವೀಪಗಳಿಂದ ಕೂಡಿದೆ" ಎಂದು ಶ್ಲೋಕದ ಎರಡು ಪಾದಗಳನ್ನು ರಚಿಸಿದನು. ಉತ್ತರಾರ್ಧವನ್ನು ರಚಿಸಲು ಅವನಿಗೆ ತಕ್ಷಣ ಹೊಳೆಯಲಿಲ್ಲ. ವಂದಿಯು ಅರ್ಧಕ್ಕೆ ನಿಲ್ಲಿಸಿದ ಶ್ಲೋಕವನ್ನು ಅಷ್ಟಾವಕ್ರನೇ ಪೂರ್ತಿಮಾಡಿದನು. ವಂದಿಯು ಕೂಡಲೇ ಸೋತು ತಲೆತಗ್ಗಿಸಿದನು. ಸಂತುಷ್ಟನಾದ ರಾಜನು ಅಷ್ಟಾವಕ್ರನನ್ನು ಯಥೋಚಿತವಾಗಿ ಗೌರವಿಸಿದನು. ಅಷ್ಟಾವಕ್ರನು ರಾಜನೊಂದಿಗೆ "ಈ ವಂದಿಯು ಹಿಂದೆ ತನ್ನಿಂದ ಸೋತ ಪಂಡಿತರನ್ನೆಲ್ಲ ನೀರಿಗೆ ತಳ್ಳಿಸಿದ್ದಾನೆ. ಇವನನ್ನೂ ಹಾಗೆಯೇ ನೀರಿಗೆ ತಳ್ಳಿಸು" ಎಂದನು. ಆಗ ವಂದಿಯು ತಾನು ವರುಣನ ಮಗನೆಂದೂ, ಪಂಡಿತರನ್ನು ವರುಣಯಾಗಕ್ಕಾಗಿ ನೀರಿನ ಮೂಲಕ ವರುಣರಾಜ್ಯಕ್ಕೆ ಕಳಿಸುತ್ತಿದ್ದುದಾಗಿಯೂ ಹೇಳಿದನು. ಅದರಂತೆಯೇ ವರುಣನಿಂದ ಸಂತುಷ್ಟರಾದ ಬ್ರಾಹ್ಮಣರೆಲ್ಲರೂ ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿಗೆ ಬಂದರು. ಅವರಲ್ಲಿ ಅಷ್ಟಾವಕ್ರನ ತಂದೆಯಾದ ಕಹೋಡನೂ ಇದ್ದನು.

ಹುಟ್ಟಿದಂದಿನಿಂದಲೂ ಕಾಣದಿದ್ದ ತಂದೆಯನ್ನು ಈಗ ಪ್ರತ್ಯಕ್ಷವಾಗಿ ಕಂಡು ಅಷ್ಟಾವಕ್ರನಿಗೆ ಬಹಳ ಸಂತೋಷವಾಯಿತು. ಅವನು ಅಭಿವಾದನ ಮಾಡಿದನು. ಅನಂತರ ಜನಕರಾಜನಿಂದ ಸತ್ಕೃತನಾಗಿ, ತಂದೆ ಮತ್ತು ಸೋದರಮಾವನೊಂದಿಗೆ ಆಶ್ರಮಕ್ಕೆ ಬಂದನು. ತಾಯಿ ಸುಜಾತೆಯ ಆನಂದಕ್ಕಂತೂ ಪಾರವೇ ಇರಲಿಲ್ಲ. ಕಹೋಡನು ಮಗನನ್ನು ಕುರಿತು, "ಮಗೂ ನಮ್ಮ ಆಶ್ರಮದ ಸಮೀಪದಲ್ಲಿರುವ ನದಿಯಲ್ಲಿ ಹೋಗಿ ಈಗಲೇ ಸ್ನಾನ ಮಾಡು" ಎಂದನು. ತಂದೆಯ ಮಾತಿನಂತೆ ಅಷ್ಟಾವಕ್ರನು ನದಿಯಲ್ಲಿ ಮುಳುಗಿ ಮೇಲೇಳಲಾಗಿ ಅವನ ಅಂಗಗಳಲ್ಲಿದ್ದ ವಕ್ರತೆಗಳೆಲ್ಲ ಮಾಯವಾದವು. ಅಂದಿನಿಂದ ಆ ನದಿಗೆ 'ಸಮಂಗಾ' ಎಂದು ಹೆಸರಾಯಿತು.

ಮುಂದೆ ಅಷ್ಟಾವಕ್ರರು ಗುರುಕುಲದಲ್ಲಿ ಶಿಷ್ಯರಿಗೆ ವಿದ್ಯಾಭ್ಯಾಸ ಮಾಡಿಸುತ್ತ ಪ್ರಸಿದ್ಧವಾಗಿ ಮುಕ್ತರಾದರು. ಇವರು ರಚಿಸಿರುವ 'ಅಷ್ಟಾವಕ್ರಸಂಹಿತಾ' ಪ್ರಸಿದ್ಧವಾದ ಅದ್ವೈತ ಗ್ರಂಥಗಳಲ್ಲೊಂದೆಂದು ಹೆಸರು ಪಡೆದಿದೆ. ಇದನ್ನು 'ಅಷ್ಟಾವಕ್ರ ಗೀತಾ' ಎಂದೂ ಕರೆಯುತ್ತಾರೆ. ಈ ಕೃತಿಯು ಅಷ್ಟಾವಕ್ರ ಮತ್ತು ಜನಕರ ಸಂವಾದರೂಪದಲ್ಲಿದೆ. ಶ್ರೀರಾಮಕೃಷ್ಣ ಪರಮಹಂಸರಿಗೆ ಪ್ರಿಯವಾಗಿದ್ದ ಈ ಕೃತಿ ಸ್ವಾಮಿ ವಿವೇಕಾನಂದರ ಮೇಲೂ ಪ್ರಭಾವವನ್ನು ಬೀರಿತ್ತು. ಈ ಕೃತಿಯು ಅದ್ವೈತದ ತತ್ವಗಳನ್ನು ಬಹಳ ಚೆನ್ನಾಗಿ ನಿರೂಪಿಸುತ್ತದೆ.

*(ಡಾ॥ ಎಸ್. ಹೇಮಲತಾ ಕೃತಿ ಪ್ರಾಚೀನ ಭಾರತದ ಮಹರ್ಷಿಗಳು ಭಾಗ–1)*

# ಭಕ್ತಿಗೆ ಮೆಚ್ಚಿದ ದೇವರು ಮತ್ತು ಗುರುಗಳು

ಸಂತ ಏಕನಾಥರು ಈಗಿನ ಮಹಾರಾಷ್ಟ್ರ ಪ್ರದೇಶದ ಸಂತರು. ತಮಗೊಬ್ಬರು ಗುರುವನ್ನು ಹುಡುಕುತ್ತಿದ್ದ ಏಕನಾಥರಿಗೆ; ದೇವಗಡಕ್ಕೆ ಹೋದರೆ ಗುರುಗಳು ಸಿಗುತ್ತಾರೆ ಎಂದು ಪ್ರೇರಣೆಯಾಯಿತು. ಅದರಂತೆ ಏಕನಾಥರು ದೂರದ ದೇವಗಡಕ್ಕೆ ಹೊರಟರು. ನಡೆದು ಬಳಲಿದ ಬಾಲಕ ಏಕನಾಥರು ದೇವಗಡದ ಕೋಟೆಯನ್ನು ತಲುಪಿದರು. ಅವರಿಗೆ ಅಲ್ಲಿ ಕೋಟೆಯ ಅಧಿಕಾರಿಗಳಾದ ಜನಾರ್ದನ ಪಂತರು ಸಿಕ್ಕಿದರು. ಅವರನ್ನೇ ಏಕನಾಥರು ತಮ್ಮ ಗುರುವೆಂದುಕೊಂಡರು.

ಜನಾರ್ದನ ಪಂತರು ಸೇನಾಪತಿಯಾಗಿದ್ದರೂ ಮಹಾ ದೈವಭಕ್ತರಾಗಿದ್ದರು. ದತ್ತಾತ್ರೇಯ ದೇವನ ಪೂಜೆಯನ್ನೂ ಮಾಡುತ್ತಿದ್ದವರು. ಅವರು ಕೂಡಾ ಏಕನಾಥರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಒಂದು ದಿನ ಜನಾರ್ದನ ಪಂತರು ಧ್ಯಾನ ಮಾಡುತ್ತಿರುವಾಗ ಕೋಟೆಯೊಳಗೆ ಪುಂಡರ ಎರಡು ಗುಂಪುಗಳ ನಡುವೆ ದೊಡ್ಡ ಗಲಭೆಯೊಂದು ನಡೆಯಿತು. ಜನಾರ್ದನ ಪಂತರನ್ನು ಧ್ಯಾನದಿಂದ ಎಬ್ಬಿಸಲು ಸೈನಿಕರು ಹಿಂದೆ ಮುಂದೆ ನೋಡುತ್ತಿದ್ದಂತೆ, ಏಕನಾಥರು ಮಾತ್ರ ಯುದ್ಧ ಕಾಲದಲ್ಲಿ ಗುರುಗಳು ಧರಿಸುತ್ತಿದ್ದ ಉಡುಪನ್ನು ಉಟ್ಟು ತಾವೊಬ್ಬರೇ ಕುದುರೆಯನ್ನು ಹತ್ತಿ ಹೊರಟರು. ಅವರಿಗೆ ತಾನು ಗುರುಗಳಂತೆ ಶಕ್ತಿಶಾಲಿ ಎಂದೆನಿಸಿತು. ಅವರ ಆವೇಶವನ್ನು ಕಂಡ ಪುಂಡರೆಲ್ಲರೂ ಓಡಿಹೋದರು. ಧ್ಯಾನದಿಂದ ಎದ್ದು ಬಂದ ಗುರುಗಳಿಗೆ ಶಿಷ್ಯನು ಸಮಯಕ್ಕೆ ಸರಿಯಾಗಿ ಮಾಡಿದ ಸಾಹಸ ಕಾರ್ಯವನ್ನು ಕೇಳಿ ಸಂತೋಷವಾಯಿತು.

ಏಕನಾಥರಿಗೆ ಒಂದು ದಿನ ಗುರುಗಳು ಕೋಟೆಯ ಖರ್ಚಿನ ಲೆಕ್ಕವನ್ನು ಬರೆದಿಡಲು ಹೇಳಿದರು. ಆದರೆ ಏಕನಾಥರಿಗೆ ಒಂದು ಕಾಸಿನ ಲೆಕ್ಕವು ತಾಳೆಯಾಗಲೇ ಇಲ್ಲ. ರಾತ್ರಿಯಿಡೀ ಹುಡುಕಿದರೂ ತಪ್ಪು ಸಿಗಲೇ ಇಲ್ಲ. ಕೊನೆಗೊಮ್ಮೆ ಲೆಕ್ಕವು ಸರಿಯಾಗಿಬಿಟ್ಟಿತು. ಸಂತೋಷದಿಂದ ಏಕನಾಥರು ಸಿಕ್ಕಿತು, ಸಿಕ್ಕಿತು ಎಂದು ಕೂಗುತ್ತ ಚಪ್ಪಾಳೆ ತಟ್ಟಿದರು. ಜನಾರ್ದನ ಪಂತರು ನಿದ್ದೆಯಿಂದ ಎಚ್ಚರಗೊಂಡು ಶಿಷ್ಯನ ಬಳಿ ಬಂದರು. ನೋಡುತ್ತಾರೆ, ಶಿಷ್ಯ ಲೆಕ್ಕ ಬರೆಯುತ್ತ ಇದ್ದ. ಇನ್ನೇನು ಬೆಳಗಾಗಲು ಪ್ರಾರಂಭವಾಗುತ್ತಿತ್ತು. ಪಂತರು ಶಿಷ್ಯನನ್ನು ಅಪ್ಪಿಕೊಂಡರು “ಮಗೂ ಇದೇ ಹಠದಿಂದ ದೇವರನ್ನು ಕಾಣಬೇಕೆಂದುಕೊಂಡರೆ ಮಾತ್ರ ಅವನು ಸಿಗುತ್ತಾನೆ” ಎಂದು ಆಶೀರ್ವಾದ ಮಾಡಿದರು.

ಏಕನಾಥರು ಕೆಲವು ದಿನ ಕಾಡಿನಲ್ಲಿದ್ದುಕೊಂಡು ತಪಸ್ಸು ಮಾಡಲು ಪ್ರಾರಂಭಿಸಿದರು. ಹಸುಕಾಯುವ ಗೊಲ್ಲನೊಬ್ಬನು ಪ್ರತಿದಿನವೂ ಅವರ ಮುಂದೆ ಹಾಲನ್ನು ಇಟ್ಟು ನಮಸ್ಕರಿಸಿ ಹೋಗುತ್ತಿದ್ದನು. ಒಂದು ದಿನ ಅವನು ಬರುವಾಗ ಒಂದು ದೊಡ್ಡ ಸರ್ಪವು ಏಕನಾಥರನ್ನು ಸುತ್ತಿಕೊಂಡಿದ್ದಿತು. ಅವನಿಗೆ ಭಯವಾಗಿ ಜೋರಾಗಿ ಬೊಬ್ಬೆ ಹಾಕಿದನು. ಏಕನಾಥರ ತಲೆಯ ಮೇಲೆ ಹೆಡೆ ಎತ್ತಿದ್ದ ಆ ಸರ್ಪವು ಮೆಲ್ಲನೆ ಕೆಳಗಿಳಿಯಿತು. ತಪಸ್ಸಿನಿಂದ ಎಚ್ಚರಗೊಂಡ ಏಕನಾಥರು ತನ್ನ ಮುಂದಿದ್ದ ಹಾಲನ್ನು ಆ ಸರ್ಪದ ಮುಂದೆ ಇಟ್ಟರು. ಅದು ಹಾಲನ್ನು

ಕುಡಿದು ಅಲ್ಲಿಂದ ಸರಸರನೆ ಹರಿದು ಮಾಯವಾಯಿತು. ಇದನ್ನು ಗುರುಗಳು ಕೇಳಿದರು. “ಮಗೂ ಆಸೆ, ಸಿಟ್ಟು, ಅಹಂಕಾರ, ಮತ್ಸರ, ಲೋಭ ಮೊದಲಾದುವು ಘಟಸರ್ಪವಿದ್ದಂತೆ. ಅದರ ಬಂಧನದಿಂದ ಬಿಡುಗಡೆಯಾದಾಗ ಮಾತ್ರ ತಪಸ್ಸು ಫಲ ನೀಡುತ್ತದೆ” ಎಂದು ತಿಳಿ ಹೇಳಿದರು. ನೀನೀಗ ಅದಕ್ಕೆ ಸಿದ್ಧನಾಗಿರುವೆ ಎಂದು ಆಶೀರ್ವದಿಸಿದರು.

ಹೀಗೆ ಹನ್ನೆರಡು ವರ್ಷ ಗುರುಗಳ ಸೇವೆ ಮಾಡಿದ ಏಕನಾಥರೊಂದಿಗೆ ಪಂತರು ತೀರ್ಥಯಾತ್ರೆಗೆ ಹೊರಟರು. ದಾರಿಯಲ್ಲಿ ದೇವಸ್ಥಾನಗಳಲ್ಲಿ ದೇವರ ದರ್ಶನ ಮಾಡಿದರು. ಪವಿತ್ರ ನದಿಗಳಲ್ಲಿ ಸ್ನಾನ ಮಾಡಿದರು. ಅಲ್ಲಿ ಸಾಧು ಸಂತರು ಮಾಡುತ್ತಿದ್ದ ಪ್ರವಚನಗಳನ್ನು ಕೇಳಿದರು. ಒಂದು ಕಡೆ ಸಂಸ್ಕೃತದ ಭಾಗವತ ಪ್ರವಚನವನ್ನು ಕೇಳಿದ ಜನಾರ್ದನ ಪಂತರು ಬಹಳ ಸಂತೋಷಪಟ್ಟರು. ಪಕ್ಕದಲ್ಲಿದ್ದ ಶಿಷ್ಯನಿಗೆ “ಮಗೂ ಭಾಗವತವನ್ನು ಇಷ್ಟೇ ಸುಂದರವಾಗಿ ಮರಾಠಿ ಭಾಷೆಯಲ್ಲಿ ಅನುವಾದ ಮಾಡು, ಅದರಿಂದ ಎಲ್ಲರಿಗೂ ಭಾಗವತವು ಅರ್ಥವಾಗುತ್ತದೆ” ಎಂದು ಹೇಳಿದರು. ಗುರುಗಳ ಮಾತಿನಂತೆ ನಡೆದುಕೊಂಡ ಏಕನಾಥರು ಮರಾಠಿಯಲ್ಲಿ ಭಾಗವತವನ್ನು ಬರೆದರು. ಅದನ್ನು ‘ಏಕನಾಥ ಭಾಗವತ’ ಎಂದು ಕರೆಯುತ್ತಾರೆ. ತೀರ್ಥಯಾತ್ರೆಯು ಮುಗಿಯುತ್ತಿದ್ದಂತೆ, ಪಂತರು ಏಕನಾಥರಿಗೆ “ಮಗೂ ನಿನ್ನ ಗುರುಕುಲದ ಅಧ್ಯಯನವು ಮುಗಿಯಿತು. ಇನ್ನು ಮುಂದೆ ನಿನಗೆ ಜಗತ್ತಿನ ಎಲ್ಲರೂ ಗುರುಗಳು ಎಂದುಕೊಂಡು ಮುಂದುವರೆ” ಎಂದು ಆಶೀರ್ವದಿಸಿದರು.

ಏಕನಾಥರು ಪ್ರತಿದಿನವೂ ಹರಿಕಥೆಗಳನ್ನು ಮಾಡುತ್ತ ಧರ್ಮದ ವಿಚಾರಗಳನ್ನು ಸುಲಭವಾಗಿ ಅರ್ಥ ಮಾಡಿಸುತ್ತಿದ್ದರು. ಅದನ್ನು ಕೇಳಲು ಶ್ರೀಮಂತರೂ ಬರುತ್ತಿದ್ದರು. ಬಡವರೂ ಕೇಳುತ್ತಿದ್ದರು. ವಿದ್ವಾಂಸರಿಗೂ ಇಷ್ಟವಾಗುತ್ತಿತ್ತು. ಓದು ಬರಹ ಬಾರದವರಿಗೂ ಸಂತೋಷವಾಗುತ್ತಿತ್ತು.

ಒಮ್ಮೆ ಒಬ್ಬ ಯುವಕನು ಏಕನಾಥರ ಬಳಿ ಬಂದು ತನಗೆ ಅವರ ಬಳಿ ಕೆಲಸ ಮಾಡಿಕೊಂಡು ಇರಲು ಬೇಡಿಕೊಂಡನು. ಏಕನಾಥರು ಒಪ್ಪಿ ಅವನಿಗೆ ದಿನವೂ ಮಾಡುವ ಪೂಜೆಗೆ ಪರಿಕರಗಳನ್ನು ಸಿದ್ಧ ಮಾಡುವ ಕೆಲಸ ಕೊಟ್ಟರು. ಶ್ರೀ ಖಂಡೆ ಎನ್ನುವ ಆ ಯುವಕನು ಮುಂದೆ ಏಕನಾಥರ ಮೆಚ್ಚಿನ ಶಿಷ್ಯನಾದನು. ಒಂದು ದಿನ ಅವರ ಮನೆಗೆ ಯಾತ್ರಿಕರೊಬ್ಬರು ಬಂದರು. ತಮಗೆ ಶ್ರೀಖಂಡೆಯನ್ನು ಕಾಣಬೇಕಿದೆ ಎಂದು ಹೇಳಿದರು. ಏಕನಾಥರಿಗೆ ಆಶ್ಚರ್ಯವಾಯಿತು. ಏಕೆ ಎಂದು ಕೇಳಿದರು. ಅದಕ್ಕೆ ಆ ಯಾತ್ರಿಕರು ಹೇಳಿದ ಮಾತು ವಿಶೇಷವಾಗಿದ್ದಿತು. ‘ನಾನು ದ್ವಾರಕೆಯ ಯಾತ್ರೆ ಮುಗಿಸಿ ಬರುತ್ತಿದ್ದೇನೆ. ಅಲ್ಲಿದ್ದಾಗ ಒಂದು ದಿನ ಶ್ರೀ ಹರಿಯು ಸ್ವಪ್ನದಲ್ಲಿ ಬಂದು, ನೀನು ಪೈಠಣಕ್ಕೆ ಹೋಗು, ಅಲ್ಲಿ ಏಕನಾಥರ ಮನೆಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಅವರ ಬಳಿ ಶ್ರೀ ಖಂಡೆಯನ್ನು ಕಾಣಬೇಕು’ ಎಂದು ಹೇಳು ಎಂದು ಹೇಳಿರುವನು. ಅದಕ್ಕಾಗಿ ಇಷ್ಟು ದೂರ ಬಂದಿದ್ದೇನೆ. ಎಂದು ಹೇಳಿದರು. ಏಕನಾಥರು ಶ್ರೀಖಂಡೆಯನ್ನು ಕರೆದರು. ಅವನು ಕಾಣಲಿಲ್ಲ. ಕಡೆಗೆ ಹೊರಗೆ ಬಂದು ಹುಡುಕುತ್ತಿದ್ದರೆ ಎದುರಿಗಿದ್ದ ಬೆಟ್ಟವನ್ನು ಹತ್ತುತ್ತಿದ್ದ ಶ್ರೀಖಂಡೆಯು ಅಲ್ಲಿಂದ ಇಳಿದು ಹೋಗುತ್ತಿದ್ದುದು ಕಂಡು ಬಂದಿತು. ಯಾತ್ರಿಕರಿಗೆ ಶ್ರೀಹರಿಯ ಬೆನ್ನು ಮಾತ್ರ ಕಂಡಿತು. ದೇವರ ಬೆನ್ನು ಕಾಣುವ ಭಾಗ್ಯವಾದರೂ ಅವರಿಗೆ ಸಿಕ್ಕಿತು.

■



# ಸೋಮೇಶ್ವರ ಶತಕ

## (ಮತ್ತೇಭವಿಕ್ರೀಡಿತವೃತ್ತ)

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ॥
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥1॥

ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ ।
ಬಿಡಬೇಕೈ ಧನಲೋಭವಂಸ್ವಜನರೊಳ್ ದುಷ್ಟಾತ್ಮರೊಳ್ಗೋಷ್ಠಿಯಂ ॥
ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ ।
ಇಡಬೇಕಿದ್ದುಣಬೇಕೆಲೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥2॥

ಚಂಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ ।
ತರುಗಳ್ ಪುಟ್ಟವೆ ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲವೇ ॥
ನಿರುತಂ ಸತ್ಕವಿಗೊರ್ವ ಗರ್ವಿಪುಸಿಯುತ್ತಂ ಲೋಭಿಯಾಗಲ್ ನಿಜಂ ।
ಧರೆಯೊಳ್ ದಾತರು ಪುಟ್ಟರೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥3॥

ರವಿಯಾಕಾಶಕೆ ಭೂಷಣಂ ರಜನಿಗಾಚಂದ್ರಂ ಮಹಾ ಭೂಷಣಂ ।
ಕುವರಂ ವಂಶಕೆ ಭೂಷಣಂ ಸತಿಗೆ ಪಾತಿವ್ರತ್ಯವೇ ಭೂಷಣಂ ॥
ಹವಿಯಜ್ಞಾಳಿಗೆ ಭೂಷಣಂ ಸರಸಿಗಂಭೋಜಾತಗಳ್ ಭೂಷಣಂ ।
ಕವಿಯಾಸ್ಥಾನಕೆ ಭೂಷಣಂ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥4॥

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧ ಬೀಜಂ ಕೆಲಂ ।
ಸಿಡಿದುಂ ಪೆರ್ಮರವಾಗದೇ ಎಳಗರುಂ ಎತ್ತಾಗದೇ ಲೋಕದೊಳ್ ॥
ಮಿಡಿ ಪಣ್ಣಾಗದೆ ದೇವರೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥5॥

1912ರಲ್ಲಿ ನಾಲ್ಕನೇ ತರಗತಿಯ ಪಠ್ಯ



# ನಿಮಗೆಷ್ಟು ಗೊತ್ತು

– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) ವಿಜ್ಞಾನ ಕ್ಷೇತ್ರದಲ್ಲಿ ಮೊಟ್ಟಮೊದಲಿಗೆ ನೊಬೆಲ್ ಪ್ರಶಸ್ತಿ ಪಡೆದ ಭಾರತೀಯ ವಿಜ್ಞಾನಿ ಯಾರು?
2) ಕಂಪ್ಯೂಟರ್‌ನಲ್ಲಿ ಬಳಸುವ ಚಿಪ್ಪುಗಳನ್ನು ಯಾವ ಮೂಲವಸ್ತುವಿನಿಂದ ತಯಾರಿಸುತ್ತಾರೆ?
3) ಅಚ್ಚಗನ್ನಡ ಛಂದಸ್ಸಿನಲ್ಲಿ ಅತ್ಯಂತ ಪ್ರಾಚೀನವಾದ ವಿಧ ಯಾವುದು?
4) ಮಹಾಭಾರತದಲ್ಲಿ ಒಟ್ಟು ಎಷ್ಟು ಪರ್ವಗಳಿವೆ?
5) ಅಯೋಧ್ಯೆಯ ರಾಮಮಂದಿರದಲ್ಲಿನ ಬಾಲರಾಮನ ಮೂರ್ತಿಯನ್ನು ಕೆತ್ತಿದ ಶಿಲ್ಪಿ ಯಾರು?
6) ಯಾವ ರಾಜ್ಯವು ಭಾರತದ ಮೊದಲ ಕೃತಕ ಬುದ್ಧಿಮತ್ತೆ (ಎಐ) ಶಾಲೆಯನ್ನು ಉದ್ಘಾಟಿಸಿದೆ?
7) ಪಂಚ ನದಿಗಳ ನಾಡು ಎಂಬ ಹೆಸರು ಪಡೆದ ಕರ್ನಾಟಕದ ಜಿಲ್ಲೆ ಯಾವುದು?
8) 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಿದವರು ಯಾರು?
9) ವಿಶ್ವ ಜನಂಖ್ಯಾ ದಿನವನ್ನು ಎಂದು ಆಚರಿಸಲಾಗುತ್ತದೆ?
10) ಕ್ರಿಕೆಟ್ ಆಟದ ಎಲ್ಲಾ ಮೂರು ಸ್ವರೂಪಗಳಲ್ಲಿ (ಟೆಸ್ಟ್, ಒನ್ ಡೇ, ಟಿ ಟ್ವೆಂಟಿ) ತಲಾ 100 ಪಂದ್ಯಗಳನ್ನು ಆಡಿದ ಮೊದಲ ಭಾರತೀಯ ಆಟಗಾರ ಯಾರು?

### ಉತ್ತರಗಳು

1) ಸರ್. ಸಿ.ವಿ. ರಾಮನ್
2) ಸಿಲಿಕಾನ್
3) ತ್ರಿಪದಿ
4) 18 ಪರ್ವಗಳು
5) ಅರುಣ್ ಯೋಗಿರಾಜ್
6) ಕೇರಳ
7) ವಿಜಯಪುರ
8) ದಯಾನಂದ ಸರಸ್ವತಿ
9) ಜುಲೈ 11 ರಂದು
10) ವಿರಾಟ್ ಕೊಹಿ







(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)

# ಶಬ್ದಶೋಧ–199

ರಚನೆ: ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು




## ಎಡದಿಂದ ಬಲಕ್ಕೆ

1) ಬಾದರಾಯಣನ ಪಿತ (4)
3) ಈಕೆ ಬೇಡಿತಿ/ರಾಮಭಕ್ತೆಯೂ ಹೌದು. ಕೊನೆಯಲ್ಲಿ ದೀರ್ಘವಾಗಿದೆ (3)
4) ಸತ್ಯಕನ ಮಗನಾದ ಯುಯುಧಾನನ ಮತ್ತೊಂದು ಹೆಸರು (3)
6) ಯಮನ ಸಹೋದರರನ ತಂದೆ ಸೂರ್ಯನನ್ನು ಹೀಗೂ ಕರೆಯಬಹುದು (4)
7) ಜನಕರಾಜನ ಮಹಿಷಿ/ಕನ್ನಡದ ಸುಪ್ರಸಿದ್ಧ ಸುಗಮ ಸಂಗೀತ ಗಾಯಕಿಯನ್ನು ಹುಡುಕಿ (4)
9) ಸುಬ್ರಹ್ಮಣ್ಯ, ಕಾರ್ತಿಕೇಯನಿಗೆ ಮತ್ತೊಂದು ಹೆಸರು (4)
12) ರಾವಣ ಧಾನ್ಯಮಾಲಿಯರ ಮಗ, ಅತಿಪರಾಕ್ರಮಿ (4)
14) ಹಿಮವಂತ, ಮೇನೆಯರ ಮಗಳು (3)
15) ಭೂಮಿಗೊಂದು ಹೆಸರನ್ನು ಇಲ್ಲಿ ಹುಡುಕಿ (3)
16) ಈತ ನೇಗಿಲೇ ಆಯುಧವಾಗಿರುವ ಬಲರಾಮ (4)





## ಮೇಲಿನಿಂದ ಕೆಳಗೆ

1) ಸರ್ಪರಾಜ ತಕ್ಷಕನಿಂದ ಹತನಾದ ರಾಜ (4)
2) ಏಳು ಪಾತಾಳ ಲೋಕಗಳಲ್ಲಿ ಒಂದು (4)
3) ಸುಬಲ ರಾಜನ ಮಗ/ದುರ್ಯೋಧನನ ಸೋದರ ಮಾವ (3)
5) ಮನುಷ್ಯ ದೇಹ, ಕುದುರೆ ಮುಖ ಇರುವವರು (3)
6) ಕುಂಭರಾಶಿಗೆ ಬರುವ ಒಂದು ನಕ್ಷತ್ರ (4)
8) ಮೃಕಂಡು ಮುನಿಯ ಮಗ, ಶಿವಭಕ್ತ (4)
10) ಹಿಂದುಮುಂದಾದ ನಾಸ್ತಿಕ, ಸಂಪ್ರದಾಯ ವಿರೋಧಿ (3)
11) ಪಂಜ/ಉಗುರಿನ ಹೊಡೆತ ಎಂಬ ಅರ್ಥದ ಪದವನ್ನು ಇಲ್ಲಿ ಹುಡುಕಿ (4)
12) ಶ್ರೀರಾಮ ಮತ್ತು ಯುಧಿಷ್ಠಿರ ಮಾಡಿದ ಅತ್ಯುತ್ತಮವಾದ ಯಜ್ಞ (4)
13) ಸೂರ್ಯನ ಮಗಳು ಯಮುನೆಗೆ ಮತ್ತೊಂದು ಹೆಸರು (3)

# ಶಬ್ದಶೋಧ – 198 ಉತ್ತರ

***ರಚನೆ:*** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*

| | | | | | | | | | | |
|---|---|---|---|---|---|---|---|---|---|---|
| | | | 1 ಆ | ನಂ | ದ | ಕಂ | 2 ದ | | | |
| | | | ಲೂ | | | | ರ್ಶ | | | |
| 3 ಬ | ರ | 4 ಗೂ | ರು | | | | 5 ನ | 6 ಟ | ರಾ | 7 ಜ |
| ಹು | | ಢ | | 8 ನಾ | ರಂ | 9 ಗ | | ಭ | | ನ |
| ಮಾ | | ಚಾ | | ವೆ | | ಣಿ | | ಣ | | ಪ |
| 10 ನ | ಹ | ರ | 11 ರಿ | | | | 12 ಅಂ | ಬಾ | ರ | ದ |
| | | | ಸ್ತೂ | | | | ಗ | | | |
| | | | 13 ಕ | ಮ | ರ | ಬಂ | ದ | | | |

# ಮತ್ತೆ ದತ್ತಯಾತ್ರೆ



ಚಿಕ್ಕಮಗಳೂರು ವಿಭಾಗ ಕಮೀಷನರ್ ಆಗಿದ್ದ ಹೆಚ್.ಎಲ್.ನಾಗೇಗೌಡರು ತಮ್ಮ 'ಬೆಟ್ಟದಿಂದ ಬಟ್ಟಲಿಗೆ' ಕೃತಿಯಲ್ಲೊಂದು ವಿಚಾರವನ್ನು ಉಲ್ಲೇಖಿಸುತ್ತಾರೆ. ಅದು ಹಿಂದುಗಳ ಪವಿತ್ರ ಕ್ಷೇತ್ರವಾದ ದತ್ತಪೀಠದ ಬಗ್ಗೆ. ಅವರು ಅಭಿಪ್ರಾಯ ಪಟ್ಟಂತೆ ಯಾವುದೋ ಒಂದು ಕಾಲಘಟ್ಟದಲ್ಲಿ ಹಿಂದುಗಳು ದತ್ತಕ್ಷೇತ್ರಕ್ಕೆ ತಮ್ಮ ಯಾತ್ರೆಯನ್ನು ಕಡಿಮೆಗೊಳಿಸುತ್ತ ಬಂದಿರಬಹುದು. ಆಗ ಮುಸ್ಲಿಂ ಫಕೀರರು ದತ್ತಕ್ಷೇತ್ರವನ್ನು ಕಬಳಿಸಿ ಅದನ್ನು ಬಾಬಾಬುಡನ್ ಗಿರಿಯೆಂದು ಕರೆದಿರಬೇಕು ಎಂದು ಅವರು ಬರೆಯುತ್ತಾರೆ.



ಇಂತಹ ಆಕಸ್ಮಿಕಕ್ಕೆ ಅವಕಾಶ ಕೊಡದಿರುವಂತಹ ವಾತಾವರಣವೀಗ ನಿರ್ಮಾಣವಾಗಿದೆ. ವಿಶ್ವ ಹಿಂದು ಪರಿಷತ್ತಿನ ಯೋಜನೆಯಂತೆ ಈಗ ಯಾತ್ರಾರ್ಥಿಗಳು ದತ್ತ ಪೀಠದಲ್ಲಿ ದತ್ತಪಾದುಕೆಯ ದರ್ಶನವನ್ನು ಕೈಗೊಳ್ಳುತ್ತಿದ್ದಾರೆ. ಕಳೆದ ತಿಂಗಳ 21ರಂದು ಯಲಹಂಕ ಜಿಲ್ಲೆಯ ನೂರು ಯಾತ್ರಿಗಳು ಜಿಲ್ಲೆಯ ಹಿರಿಯರಾದ ಡಾ|| ಜಯಶಂಕರ್ ಪ್ರಾಂತಸಂಪರ್ಕ ಪ್ರಮುಖ್ ಮಂಜುನಾಥ ಸ್ವಾಮಿಯವರ ನೇತೃತ್ವದಲ್ಲಿ ದತ್ತಪೀಠದ ದರ್ಶನವನ್ನು ಮಾಡಿದರು. ಅಲ್ಲಿ ಶಾಸ್ತ್ರೋಕ್ತವಾದ ಹೋಮ ಹವನ, ಮಾಣಿಕ್ಯಧಾರಾ ಸ್ನಾನ, ಪಾದುಕಾ ದರ್ಶನ, ನಂತರ ಹಿರೇಮಗಳೂರು ಕೋದಂಡರಾಮ ದೇವರ ದರ್ಶನವನ್ನು ಪಡೆದು ಬೆಂಗಳೂರಿಗೆ ಮರಳಿದರು.



# ಮಂಗಳೂರು – ಸೇವಾ ವಿಭಾಗದ ಟ್ರೆಂಡ್‌ಸೆಟ್ಟರ್




ಗುರುಪುರ





ಯೆನೆಪೋಯ ಆಸ್ಪತ್ರೆಯಿಂದ ವಿಶ್ವ ರಕ್ತದಾನಿಗಳ ದಿನಾಚರಣೆಯ ಪ್ರಯುಕ್ತ ವಿಶ್ವ ಹಿಂದೂ ಪರಿಷತ್ ಮಂಗಳೂರು ಇದರ ರಕ್ತದಾನ ಪೂರೈಕೆಯ ಸೇವೆಯನ್ನು ಗುರುತಿಸಿ ಗೌರವಾರ್ಪಣೆ ಮಾಡಲಾಯಿತು. ವಿಶ್ವ ಹಿಂದೂ ಪರಿಷತ್ ಮಂಗಳೂರು ಜಿಲ್ಲೆಯ ಸೇವಾ ಪ್ರಮುಖರಾದ ದೀಪಕ್ ಮರೋಳಿ ಇವರು ಗೌರವಾರ್ಪಣೆ ಸ್ವೀಕರಿಸಿದರು.



ನಿಟ್ಟೆ ಆಸ್ಪತ್ರೆಯ ರಕ್ತಕೇಂದ್ರದಿಂದ ಕೃತಜ್ಞತೆ



ಕಾವೂರು



ಮಂಗಳೂರು ಪರಿಷದ್ ರಕ್ತದಾನ ಸೇವೆಗೆ ಅಭಿನಂದನೆ



ಕಾವೂರು ಅಂಬುಲೆನ್ಸ್ ಸೇವೆ



ನಾಗೂರಿ ರಕ್ತದಾನ

# ಹೆಸರಿನೊಂದಿಗೆ ಸಂಸ್ಕೃತಿ

**ಅಕ್ರೂರ:** ಯದುವಂಶದವನು. ತಂದೆ ಶ್ವಫಲ್ಕ. ತಾಯಿ ಗಾಂದಿನಿ. ಕಂಸನ ಮಂತ್ರಿಗಳಲ್ಲಿ ಈತ ಒಬ್ಬ ಸಾತ್ವಿಕ ವ್ಯಕ್ತಿ. ಮಥುರೆಯ ಬಿಲ್ಲು ಹಬ್ಬಕ್ಕೆ ಕೃಷ್ಣ ಬಲರಾಮರನ್ನು ಕಂಸನ ಆಜ್ಞೆಯಂತೆ ಕರೆತರಲು ಗೋಕುಲಕ್ಕೆ ಬಂದವನು.

**ಉದ್ಧವ:** ಶ್ರೀ ಕೃಷ್ಣನ ಬಾಲ್ಯ ಸ್ನೇಹಿತ. ವಸುದೇವನ ತಮ್ಮನಾದ ದೇವಭಾಗನ ಮಗ. ಕೃಷ್ಣನು ಕಂಸನನ್ನು ಕೊಂದ ವಾರ್ತೆಯನ್ನು ಗೋಕುಲಕ್ಕೆ ಮೊದಲು ತಲುಪಿಸಿದವನು. ಶ್ರೀ ಕೃಷ್ಣನ ನಿರ್ಯಾಣ ಕಾಲದಲ್ಲಿ ಅವನಿಂದ ಉಪದೇಶವನ್ನು ಪಡೆದನು.

**ಕೃತ:** ವಸುದೇವ ರೋಹಿಣಿಯರ ಮಗ. ಏಳನೆಯವನೂ, ಕೊನೆಯವನು. ಬಲರಾಮನ ತಮ್ಮ.

ನಾಲ್ಕು ಯುಗಗಳಲ್ಲಿ ಮೊದಲನೆಯದ್ದು. ಈ ಯುಗದಲ್ಲಿ ಯಾರೂ ಯಾರನ್ನೂ ಬೇಡುತ್ತಿರಲಿಲ್ಲ. ದಾನವನ್ನು ಕೊಡಲು ಹುಡುಕಿಕೊಂಡು ಹೋಗಬೇಕಾಗಿದ್ದಿತು.

**ಗಾಯತ್ರೀ:** ಜ್ಞಾನಶಕ್ತಿಯು ಹೆಸರು. ಈ ದೇವತೆಯನ್ನು ಉಪಾಸನೆ ಮಾಡಲು ಇರುವ ಮಂತ್ರಕ್ಕೂ ಗಾಯಿತ್ರಿಯೆಂದೇ ಹೆಸರು.

**ಜಯಂತ:** ಇಂದ್ರ ಮತ್ತು ಪೌಲೋಮಿಯರ ಮಗ.

**ದೇವದತ್ತ:** ಅರ್ಜುನನ ಶಂಖದ ಹೆಸರು. ಇದನ್ನು ಅವನಿಗೆ ಇಂದ್ರನು ಕೊಟ್ಟಿದ್ದನು.

**ನಂದಾ:** ಋಷಭಕೂಟ ಪರ್ವತದಲ್ಲಿ ಉಗಮಿಸಿ ಕುಬೇರನ ರಾಜಧಾನಿಯಾದ ಅಲಕಾ ಪಟ್ಟಣದ ಬಳಿ ಹರಿಯುವ ನದಿ.

ಪ್ರಜಾಪತಿಗಳಲ್ಲಿ ಒಬ್ಬನಾದ ಧರ್ಮನ ಮಗ ಹರ್ಷನ ಪತ್ನಿ.

**ಪರೀಕ್ಷಿತ:** ಅಭಿಮನ್ಯುವಿನ ಮಗ. ವಿರಾಟರಾಜನ ಮಗಳು ಉತ್ತರೆ, ಈತನ ತಾಯಿ. ಗರ್ಭದಲ್ಲಿರುವಾಗ ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರಕ್ಕೆ ಆಹುತಿಯಾದವನು. ಶ್ರೀಕೃಷ್ಣನಿಂದ ಮರಳಿ ಬದುಕಿ ಬಂದವನು. ಶ್ರೀಕೃಷ್ಣನ ನಿರ್ಯಾಣದ ನಂತರ ಪಾಂಡವರು ಇವನಿಗೆ ಪಟ್ಟ ಕಟ್ಟಿ ಮಹಾಪ್ರಸ್ಥಾನಕ್ಕೆ ಹೊರಟರು. ಪರೀಕ್ಷಿತನ ಪತ್ನಿ ಇರಾವತಿ. ಜನಮೇಜಯನು ಇವನ ಮಗ.

**ಪೃಥಾ:** ಕುಂತಿಭೋಜ ಮಹಾರಾಜನ ಮಗಳು. ಇವಳನ್ನು ಕುಂತಿಯೆಂದೇ ಕರೆಯುತ್ತಾರೆ. ಪಾಂಡವರಲ್ಲಿ ಯುಧಿಷ್ಠಿರ. ಭೀಮ, ಅರ್ಜುನರ ತಾಯಿ.

**ಪ್ರದ್ಯುಮ್ನ:** ಶ್ರೀಕೃಷ್ಣ ಮತ್ತು ರುಕ್ಮಿಣಿಯರ ಮಗ. ಮನ್ಮಥನ ಅವತಾರ. ಇವನ ಮಗ ಅನಿರುದ್ಧ.

**ಪ್ರಭಾಸ:** ಅಷ್ಟ ವಸುಗಳಲ್ಲಿ ಒಬ್ಬ. ಬೃಹಸ್ಪತಿಯ ತಂಗಿ. ಯೋಗಸಿದ್ಧಿ ಇವನ ಪತ್ನಿ. ಇವನ ಪುತ್ರನೇ ವಿಶ್ವಕರ್ಮ.

# ಉಚ್ಚಿಲ ಶ್ರೀ ಮಹಾಲಕ್ಷ್ಮೀ ಕ್ಷೇತ್ರ

**– ಪಾರಿಜಾತ. ಬಿ.ಎಸ್. ಬೆಂಗಳೂರು.**



ಜೀವನದ ಹಾದಿ ಸುಖಮಯವಾಗಿರಲು ಮನಸ್ಸು ಮತ್ತು ದೇಹ ಆರೋಗ್ಯವಾಗಿರಬೇಕು. ಶಾಂತಿ, ನೆಮ್ಮದಿ ಮನಸ್ಸಿನ ಆರೋಗ್ಯದ ಅಂಶವಾದರೆ, ಸದೃಢ ದೇಹ ಶರೀರದ ಆರೋಗ್ಯಕ್ಕೆ ಸೇರಿದ ಅಂಶ. ಮನಸ್ಸು ಉತ್ತಮವಾಗಿದ್ದು, ದೇಹ ಅನಾರೋಗ್ಯದಿಂದ ಕೂಡಿದ್ದರೆ ಅಥವಾ ದೇಹ ಆರೋಗ್ಯಕರವಾಗಿದ್ದು ಮಾನಸಿಕ ನೆಮ್ಮದಿ ಶಾಂತಿಯಿಲ್ಲದಿದ್ದರೆ ಜೀವನದ ಹೆಜ್ಜೆ ಅಸ್ಪಷ್ಟವಾಗುತ್ತದೆ. ಈ ಎರಡನ್ನೂ ಸದೃಢಗೊಳಿಸಲು ಸದಾ ಜಾಗೃತವಾಗಿ ಚಟುವಟಿಕೆಯಿಂದಿರುವುದು ಜಾಣತನ. ಉತ್ತಮ ಜ್ಞಾನ ಮತ್ತು ಬುದ್ಧಿ ಜೀವನದ ಹಾದಿಯನ್ನು ಸುಗಮಗೊಳಿಸುವುದು. ಆದರೆ ಇವೆರಡನ್ನು ಸರಿಯಾದ ಸಮಯದಲ್ಲಿ ಉತ್ತಮ ರೀತಿಯಲ್ಲಿ ಬಳಸಿಕೊಂಡಾಗ ಮಾತ್ರ ದೇಹ ಮನಸ್ಸು ಉತ್ತಮವಾಗಿರಲು ಏನೇನು ಅಗತ್ಯವೆಂಬುದು ಜ್ಞಾನದಿಂದ ತಿಳಿದರೆ ಅದನ್ನು ಹೇಗೆ? ಯಾವಾಗ? ಎಷ್ಟು ? ಎಂಬುದು ಬುದ್ಧಿಗೆ ಸೇರಿದ್ದು, ಅಂತೆಯೇ ಸುಖಮಯ ಜೀವನಕ್ಕೆ ಹಣವೊಂದೇ ಪರಿಹಾರವಲ್ಲ ಎಂಬುದು ತಿಳಿದ ವಿಷಯ ಆದರೂ ಸಂಪತ್ತಿನೊಂದಿಗೆ ಜೀವನ ಕಾಣಲು ಬಯಸುವುದು ಮಾನವನ ಸಹಜ ಗುಣ.

**ಸಿದ್ಧಿ ಬುದ್ಧಿಪ್ರದೇ ದೇವಿ ಭುಕ್ತಿಮುಕ್ತಿಪ್ರದಾಯಿನಿ**
**ಮಂತ್ರಮೂರ್ತೇ ಸದಾ ದೇವಿ ಮಹಾಲಕ್ಷ್ಮೀ ನಮೋಸ್ತುತೇ**

ಸಕಲ ಸಂಪತ್ತಿನ ಅಧಿದೇವತೆ ತಾಯಿ ಮಹಾಲಕ್ಷ್ಮಿ. ಆಕೆಯನ್ನು ಒಲಿಸಿಕೊಂಡರೆ ಜೀವನದ ಹಾದಿ ಸುಖಮಯ ಎಂಬ ನಂಬಿಕೆಯಿಂದ ತಾಯಿಯ ಆರಾಧನೆ, ಆಕೆಯ ಸಾನ್ನಿಧ್ಯವಿರುವ ಕ್ಷೇತ್ರಗಳ ಭೇಟಿ ಇತ್ಯಾದಿ ಕೈಗೊಳ್ಳುವುದು ವಾಡಿಕೆ. ಇಂತಹ ಸಕಲ ಸಂಪತ್ತನ್ನು ನೀಡುವ ತಾಯಿ ಮಹಾಲಕ್ಷ್ಮಿಯ ಸಾನ್ನಿಧ್ಯವಿರುವ ಅನೇಕ ಪವಿತ್ರ ಕ್ಷೇತ್ರಗಳು ನಮ್ಮ ದೇಶದಲ್ಲಿವೆ. ಮುಂಬೈ ಹಾಗು ಕೊಲ್ಲಾಪುರದ ಶ್ರೀ ಮಹಾಲಕ್ಷ್ಮೀ ದೇಗುಲಗಳು ಪ್ರಸಿದ್ಧವಾದವುಗಳಾದರೆ ಅಂತಹುದೇ ಪ್ರಸಿದ್ಧ ಹಾಗು ಪಾವಿತ್ರತೆಯ ನೆಲೆಯಾದ ಉಚ್ಚಿಲ ಮಹಾಲಕ್ಷ್ಮೀ ದೇಗುಲವು ನಮ್ಮ ಕರ್ನಾಟಕದಲ್ಲಿದೆ.

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಉಚ್ಚಿಲ ಕ್ಷೇತ್ರದಲ್ಲಿ ಪ್ರಭಾವಶಾಲಿ ತಾಯಿ ಮಹಾಲಕ್ಷ್ಮಿಯ ದೇಗುಲವಿದೆ. ಇದು ಬೆಂಗಳೂರಿನಿಂದ ಸುಮಾರು 400ಕಿ.ಮೀ ದೂರದಲ್ಲಿದೆ. ಉಡುಪಿ ಮಂಗಳೂರಿನ ಸುತ್ತಮುತ್ತಲ ಜನರ ಆರಾಧ್ಯ ದೈವವಾಗಿ ಸುಂದರವಾದ ಪ್ರಕೃತಿಯ ಮಡಿಲಿನಲ್ಲಿದ್ದು, ಬರುವ ಭಕ್ತರ ಬೇಡಿಕೆಗಳನ್ನು ಈಡೇರಿಸುವ ತಾಣವಾಗಿದೆ.



## ಐತಿಹಾಸಿಕ ಹಿನ್ನೆಲೆ

ಈ ಕ್ಷೇತ್ರವು ಸುಮಾರು 1957ಕ್ಕೂ ಮುಂಚಿನ ಕಾಲದಲ್ಲಿ ಮೂಲ ಸ್ಥಾನವಾಗಿ ಮೊಗವೀರರ ಕುಲದೇವತೆಯಾಗಿ ಈ ಕ್ಷೇತ್ರವು ಪ್ರಮುಖ ತಾಣವಾಗಿದ್ದಿತು. ದಕ್ಷಿಣ ಕರ್ನಾಟಕ ಹಾಗು ಉತ್ತರ ಕೇರಳದ ಶೈಲಿಯನ್ನು ಹೋಲುವ ವಾಸ್ತುಶಿಲ್ಪದಲ್ಲಿ ಈ ದೇಗುಲ ನಿರ್ಮಾಣವಾಗಿದೆ. ಇದನ್ನು ತುಳುನಾಡಿನ ವಾಸ್ತುಶಿಲ್ಪವೆಂದು ಹೇಳಲಾಗುತ್ತದೆ.

## ಶ್ರೀ ಮಹಾಲಕ್ಷ್ಮೀ ದೇಗುಲ

ಸುಂದರ ಪ್ರಕೃತಿಯ ನಡುವೆ ವಿಶಾಲವಾದ ಪ್ರದೇಶದಲ್ಲಿ ಸುಂದರ ಕೆತ್ತನೆಯ ಕಲ್ಲಿನ ಕಂಬಗಳಿಂದ ಆವೃತವಾದ ಕಟ್ಟಡವಾಗಿ ನಿರ್ಮಾಣವಾಗಿರುವ ಈ ದೇಗುಲವು ಮುಂಭಾಗದಲ್ಲಿ ಸುಂದರವಾದ ಧ್ವಜಸ್ಥಂಭವನ್ನು ಹೊಂದಿದೆ. ದೇಗುಲದ ಮೇಲ್ಛಾವಣಿಯು ಮಳೆ ನೀರು ಹರಿದು ಹೋಗುವಂತೆ ಇಳಿಜಾರಾಗಿ ನಿರ್ಮಾಣವಾಗಿದೆ. ದೇಗುಲದ ಮುಂಭಾಗದ ಎತ್ತರದ ರಾಜಗೋಪುರವು ಆಕರ್ಷಕವಾಗಿದೆ.

ವಿವಿಧ ಸುಂದರ ಕೆತ್ತನೆಯ ಕಲ್ಲಿನ ಗೋಡೆ ಹಾಗು ಆಕರ್ಷಕ ಮೇಲ್ಛಾವಣಿಯನ್ನು ಹೊಂದಿದೆ. ವಿಶಾಲವಾದ ಪ್ರದಕ್ಷಿಣಾ ಆವರಣ, ಮುಖಮಂಟಪ, ಸುಕನಾಸಿ ದಾಟಿದರೆ ಎರಡು ಅಂಕಣದ ಗರ್ಭಗುಡಿಯಿದೆ. ಕಲ್ಲಿನ ಗೋಡೆಯಿಂದ ಆವೃತವಾದ ಗರ್ಭಗೃಹದ ಮೇಲ್ಛಾವಣಿಯು ತಾಮ್ರದ ಹಾಳೆಗಳಿಂದ ಅಲಂಕೃತವಾಗಿದೆ. ಬೇಲೂರು, ಹಳೇಬೀಡಿನ ಶಿಲ್ಪಕಲೆಯನ್ನು ನೆನಪು ಮಾಡುವ ಶಿಲ್ಪಗಳು ಇಲ್ಲಿವೆ. ಗರ್ಭಗೃಹದಲ್ಲಿ ತಾಯಿ ಮಹಾಲಕ್ಷ್ಮಿಯ ವಿಗ್ರಹವು ಆಕರ್ಷಕವಾಗಿದೆ. ದೇಗುಲದ ಆವರಣದಲ್ಲಿ ಭದ್ರಕಾಳಿ ಹಾಗು ಶ್ರೀ ಪ್ರಸನ್ನ ಗಣಪತಿ ದೇಗುಲಗಳಿವೆ. ಪಕ್ಕದಲ್ಲಿ ನಾಗಬನವಿದೆ.

ಸುಂದರ ಕೆರೆಯನ್ನು ಒಳಗೊಂಡಂತೆ ವಿಶಾಲವಾದ ಸುಮಾರು 6 ಎಕರೆ ಪ್ರದೇಶದಲ್ಲಿ ದೇವಾಲಯದ ಭಾಗವು ಸಾಂಪ್ರದಾಯಿಕವಾಗಿ ನಿರ್ಮಾಣಗೊಂಡಿದ್ದು, ವ್ಯವಸ್ಥಿತವಾದ ಪೂಜಾ ಕಾರ್ಯಕ್ಕೆ ಅನುಕೂಲವಾಗಿದೆ. ಈ ದೇಗುಲವು ಕಾಲಕಾಲಕ್ಕೆ ಅಭಿವೃದ್ಧಿಯನ್ನು ಕಂಡು ಇತ್ತೀಚೆಗೆ ಜೀರ್ಣೋದ್ಧಾರ ಕಾರ್ಯ ನಡೆಸಲಾಗಿದೆ. ಇಲ್ಲಿನ ಮೀನುಗಾರರಿಗೆ ಅತ್ಯಂತ ಪವಿತ್ರವಾದ ದೇವಿಯಾಗಿ ಪೂಜಿಸಲ್ಪಡುತ್ತದೆ. ಹೆದ್ದಾರಿಯಲ್ಲಿನ ಈ ದೇಗುಲ ಯಾತ್ರಾರ್ಥಿಗಳಿಗೆ ಸುಲಭವಾಗಿ ತಲುಪಲು ಸಹಾಯಕವಾಗಿದೆ. ಇಲ್ಲಿನ ಕಲ್ಯಾಣಿಯು ಮೆಟ್ಟಿಲುಗಳನ್ನು ಒಳಗೊಂಡು ವಾಸ್ತು ಪ್ರಕಾರ ಸುಂದರವಾಗಿ ನಿರ್ಮಾಣಗೊಂಡಿದೆ. ಪ್ರಕೃತಿಯ ಸೊಬಗನ್ನು ಸಾರುವಂತಿದೆ.

ಈ ಕ್ಷೇತ್ರವು ತನ್ನ ವಾಸ್ತುಶಿಲ್ಪಕ್ಕೆ ಹೆಸರಾದಂತೆ ಇಲ್ಲಿನ ಪೂಜಾ ಕೈಂಕರ್ಯಕ್ಕೂ ಹೆಸರಾಗಿದೆ ಉಡುಪಿಯ ಶ್ರೀ ಕೃಷ್ಣ ದೇಗುಲದಂತೆ ವಿಶೇಷ ಪೂಜಾ ಕಾರ್ಯಗಳು ದಿನವಿಡೀ ನಡೆಯುತ್ತವೆ. ಇಲ್ಲಿನ ಚಾವಡಿಯಲ್ಲಿ ಗಣೇಶ ಚತುರ್ಥಿಯು ವಿಶೇಷವಾಗಿ ಆಚರಿಸಲ್ಪಡುತ್ತಿದೆ.



### ಯಾತ್ರಿಕರಿಗೆ ವಿಶೇಷ ಮಾಹಿತಿ

- ಈ ಕ್ಷೇತ್ರವು ಬೆಂಗಳೂರಿನಿಂದ ಸುಮಾರು 400ಕಿ.ಮೀ ದೂರದಲ್ಲಿದೆ.
- ಶುಕ್ರವಾರ ವಿಶೇಷ ಪೂಜೆ ಹಾಗು ಭೋಜನ ವ್ಯವಸ್ಥೆ ಇರುತ್ತದೆ.
- ಎಲ್ಲಾ ಹಬ್ಬಗಳಲ್ಲೂ ವಿಶೇಷ ಆಚರಣೆ ಪೂಜೆ ನೆರವೇರುತ್ತದೆ.
- ನವರಾತ್ರಿ ಅತ್ಯಂತ ವಿಶೇಷ.
- ಮಾರ್ಚ್ ತಿಂಗಳಿನಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತದೆ.
- ಇಲ್ಲಿಗೆ ಬಸ್ಸಗಳ ವ್ಯವಸ್ಥೆ ಇದ್ದು ಪಡುಬಿದ್ರಿ ಹತ್ತಿರದ ರೈಲ್ವೆ ನಿಲ್ದಾಣ.
- ಮಂಗಳೂರಿನವರೆಗೂ ವಿಮಾನ ಪ್ರಯಾಣ ಮಾಡಬಹುದು.
- ಮಂಗಳೂರಿನಿಂದ 35 ಕಿ.ಮೀ, ಉಡುಪಿಯಿಂದ 25 ನಿಮಿಷಗಳ ದಾರಿ.
- ಇಲ್ಲಿಗೆ ಮಂಗಳೂರು, ಪಡುಬಿದ್ರಿ, ಉಡುಪಿಯ ಅನೇಕ ದೇಗುಲಗಳು ಹತ್ತಿರದಲ್ಲಿವೆ.

ದೇಗುಲವು ಬೆಳಿಗ್ಗೆ 6 ರಿಂದ ರಾತ್ರಿ 8 ರವರೆಗೂ ತೆರೆದಿರುತ್ತದೆ. ಮಧ್ಯಾಹ್ನ 2.30 ರಿಂದ 4 ರವರೆಗೂ ಮುಚ್ಚಿರುತ್ತದೆ.

## ಶ್ರೀರಾಮ ಜನ್ಮಭೂಮಿ ಮಂದಿರ

### ಛಾವಣಿಯಿಂದ ಮಳೆಯ ನೀರು ತೊಟ್ಟಿಕ್ಕುತ್ತಿದೆ ಎನ್ನುವ ಸಮಾಚಾರ



ಜನ್ಮಭೂಮಿ ಮಂದಿರದ ಛಾವಣಿಯಿಂದ ಶ್ರೀರಾಮಲಲಾನ ಸಮಕ್ಷಮವಿರುವ ಗರ್ಭಗೃಹದೊಳಗೆ ಮಳೆನೀರಿನ ಒಂದು ಹನಿಯು ಕೂಡಾ ತೊಟ್ಟಿಕ್ಕುತ್ತಿಲ್ಲ. ಇನ್ನು,ಮಳೆಯ ನೀರು ಇನ್ನೆಲ್ಲಿಂದಲೂ ಗರ್ಭಗೃಹದೊಳಗೆ ಪ್ರವೇಶಿಸುತ್ತಿಲ್ಲ.

**ಚಂಪತ್ ರಾಯ್,** ಕಾರ್ಯದರ್ಶಿ, ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ

# ಬಗೆಬಗೆ ವೇಷ

– ಶಾರದಾ ವಿ. ಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು

ಶಿವಮೊಗ್ಗದಲ್ಲಿ ತವರಿನ ಒಂದು ಸಮಾರಂಭಕ್ಕೆ ನಾವೆಲ್ಲರೂ ಸೇರಿದ್ದೆವು. ಅಲ್ಲಿಯ ಸಂಭ್ರಮ, ಆತ್ಮೀಯರೆಲ್ಲರ ಭೇಟಿ, ಮಾತುಕತೆ ಸಹಜವಾಗಿಯೇ ಖುಷಿ ತಂದಿತು. ಈಗಂತೂ ಎಲ್ಲರ ಮನೆಗೆ ಭೇಟಿ ಕೊಡುವುದಂತೂ ತುಂಬಾ ಕಷ್ಟ. ಹೀಗೊಂದು ಕಡೆ ಎಲ್ಲರೂ ಒಟ್ಟು ಸೇರಿದಾಗ ಸಂತಸಕ್ಕೆ ಗರಿ ಮೂಡುತ್ತದೆ.

ಅಲ್ಲಿನ ಕಾರ್ಯಕ್ರಮ ಮುಗಿದರೂ ಅದೇ ಗುಂಗಿನಲ್ಲಿದ್ದ ನಾವು ಆ ಬಗ್ಗೆಯೇ ಹರಟುತ್ತಾ ನಮ್ಮ ಮುಂದಿನ ಪ್ರಯಾಣಕ್ಕೆ ಹೊರಟಿದ್ದೆವು. "ತುಂಬಾ ಸಂತೋಷದಲ್ಲಿದ್ದೀರಿ... ನಮ್ಮ ನೆನಪೇ ಇಲ್ಲವಾ ಅಮ್ಮ? ಎದುರಿಗೆ ಸಿಕ್ಕರೂ ಮಾತನಾಡಿಸದೆ ಹಾಗೇ ಹೋಗ್ತಿದ್ದೀರಿ.. ಇದು ಸರಿಯಾ... ಎಂದು ಸ್ಕೂಟರ್ ನಿಲ್ಲಿಸಿ ಮಾತನಾಡಿದ ಆ ವ್ಯಕ್ತಿ ನನ್ನನ್ನು ತಬ್ಬಿಬ್ಬುಗೊಳಿಸಿದ್ದರು. ಎಷ್ಟೇ ತಲೆಕೆಡಿಸಿಕೊಂಡರೂ ಆತನ ಬಗ್ಗೆ ಹಿಂದೆ ನೋಡಿದ್ದ ನೆನಪೇ ಆಗದು. ಪಕ್ಕದಲ್ಲಿದ್ದವರದ್ದು ಪ್ರಶ್ನಾರ್ಥಕ ನೋಟವೇ! ಇತ್ತೀಚೆಗಂತೂ ಇಂತಹ ಮರೆಯುವಿಕೆ ಸಂಭವಿಸುತ್ತಾ ನನ್ನ ವಯಸ್ಸನ್ನು ನೆನಪಿಸುತ್ತದೆ. ಇನ್ನು ಪರಿಚಿತರ ಹೆಸರು ಸಮಯಕ್ಕೆ ಸರಿಯಾಗಿ ನೆನಪಾಗದೆ ಆದೆಷ್ಟೋ ಹೊತ್ತಿನವರೆಗೆ ತಲೆಯಲ್ಲಿ ಕೊರೆಯುತ್ತಿರುತ್ತದೆ. ಮತ್ತೆ ಯಾವಾಗಲೋ ನೆನಪಾಗಿ ಬಿಡುಗಡೆ ಸಿಕ್ಕಂತಾಗುತ್ತದೆ.

ನನ್ನ ತಳಮಳವನ್ನು ಗಮನಿಸಿದವರಂತೆ "ಏನಮ್ಮಾ... ಹಣ್ಣು, ತರಕಾರಿ ತಗಳೋಕೆ ಗಾಂಧಿಬಜಾರ್‌ನಲ್ಲಿ ನನ್ನ ಹತ್ತಿರವೇ ಬರ್ತಾ ಇರಲಿಲ್ವಾ? ನೀವು ವ್ಯಾಪಾರ ಮಾಡಿದ್ರೆ ನಸೀಬು ಖುಲಾಯಿಸ್ತಿತ್ತು. ಅಪ್ಪಾವ್ರಂತೂ ಹುಡುಕಿಕೊಂಡು ನನ್ನ ಹತ್ತಿರವೇ ಬರ್ತಿದ್ರಲ್ಲ... ಪಾಪ... ತುಂಬಾ ಒಳ್ಳೇ ಮನುಷ್ಯರು... ಚೆನ್ನಾಗಿದ್ದಾರಾ ತಾಯಿ... ಏನೋ ಅವರ ಆಶೀರ್ವಾದ... ಅದಕ್ಕೇ ಚೆನ್ನಾಗಿದ್ದೀವಿ ಎಂದೆಲ್ಲಾ ಹೇಳಿದರೂ ಆತನ ಬಗ್ಗೆ ಸುಳಿವೇ ಸಿಗದು. ಆದರೂ ತಂದೆಯವರ ಕುರಿತು ಅಷ್ಟೆಲ್ಲಾ ಒಳ್ಳೆಯ ಮಾತನಾಡಿದಾಗ ಸಂತಸವಂತೂ ಆಗಿತ್ತು ಈಗ ಅಷ್ಟೆಲ್ಲಾ ಒಳ್ಳೆಯ ಮಾತನಾಡಿದಾಗ ಸಂತಸವಂತೂ ಆಗಿತ್ತು. ಈಗ ನಾವಿರುವುದೆಲ್ಲಿ, ಮಕ್ಕಳು ಏನು ಮಾಡುತ್ತಿದ್ದಾರೆ ಎಂಬುದನ್ನೆಲ್ಲಾ ಕೇಳಿ ತಿಳಿದುಕೊಂಡರಾತ. ಅವರು ಇಷ್ಟೆಲ್ಲಾ ವಿಚಾರಿಸುವಾಗ ನಾನೂ ಏನಾದರೂ ಕೇಳಲೇಬೇಕಲ್ಲ... "ಈಗಲೂ ನೀವು ಹಣ್ಣಿನ ವ್ಯಾಪಾರವನ್ನೇ ಮಾಡ್ತಿದ್ದೀರಾ?" ಎಂದು ಆಸಕ್ತಿ ತೋರಿಸಿದ್ದೆ.

ಇಲ್ಲಮ್ಮ... ನನಗೆ ಹಾರ್ಟ್ ಆಪರೇಷನ್ ಆಯ್ತಲ್ಲ... ತುಂಬಾ ಆಯಾಸ ಮಾಡಿಕೊಳ್ಳೋಹಾಗಿಲ್ಲ. ಆದರೆ ಬಿಡೋ ಹಾಗೂ ಇಲ್ಲ.. ಮಗನಿಗೂ ಕೆಲಸ ಇಲ್ಲ ಅದಕ್ಕೇ ಸಣ್ಣಪುಟ್ಟ ವ್ಯಾಪಾರ ಮಾಡ್ಕೊಂಡಿದ್ದೀನಿ. ಆತನ ದನಿಯಲ್ಲಿದ್ದ ಬೇಸರವನ್ನು ಎಲ್ಲರೂ ಗಮನಿಸಿದ್ದೆವು. ಸಹಜವಾಗಿಯೇ ಅನುಕಂಪ ಹುಟ್ಟಿತ್ತು.

"ನೋಡಿ ಅಮ್ಮಾ... ನೀವೆಲ್ಲರೂ ಒಟ್ಟಾಗಿಯೇ ಸಿಕ್ಕಿದ್ದೀರಿ. ನನ್ನ ವ್ಯಾಪಾರದ ಬಗ್ಗೆ ಕೇಳಿದಿರಿ ಹೀಗೆ ಬೇಕಾದವ್ರಿಗೆ ಅಂತ ಸ್ವಲ್ಪ ಮಾತ್ರ ಇಟ್ಕೊಂಡಿದ್ದೀನಿ. ನಿಮಗೂ ಕೊಡ್ತೀನಿ. ಆಮೇಲೆ ವಿಳಾಸವನ್ನು ಕೊಡ್ತೀನಿ. ನೀವೇ ಕೇಳಿ ತರಿಸ್ಕೊಳ್ತೀರಿ. ಎಂದು ಸ್ಕೂಟರ್ ಹ್ಯಾಂಡಲ್‌ಗೆ ಸಿಕ್ಕಿಸಿದ್ದ ಚೀಲಕ್ಕೆ ಕೈಹಾಕಿ ತೆಗೆಯಲು ಹೋದಾಗ ನಮಗೂ ಮುಜುಗರವೆನಿಸಿತು.

'ಬೇಡಪ್ಪ ಬೇಡ...ನಮಗೀಗ ಯಾವ ವಸ್ತುವೂ ಬೇಡ'. ಎಂದರೂ. ಆತ ಒತ್ತಾಯ ಮಾಡುತ್ತಾ ಕೈ ಬೊಗಸೆಯಲ್ಲಿ ಚಿಕ್ಕ ಪ್ಯಾಕೆಟ್‌ಗಳನ್ನಿಟ್ಟುಕೊಂಡು ಕೊಡತೊಡಗಿದ್ದರು. "ನಿಮ್ಮದೇ ಬೋಣಿ... ನೀವೆಷ್ಟು ಹಣ ಕೊಡ್ತಿರೋ ಕೊಡಿ.. ನಿಮ್ಗೆ ನಾನು ಇಷ್ಟು ಅಂತ ಕೇಳೋಲ್ಲ .. ಎಂದು ಆಗ್ರಹಪೂರ್ವಕವಾಗಿ ಕೊಡಲು ಬಂದಾಗ ನಾವು ಮತ್ತಷ್ಟು ಹಿಂಜರಿದಿದ್ದೆವು.

"ಏನದು" ಜೊತೆಯಲ್ಲಿದ್ದ ಮಗಳು ಪ್ರಶ್ನಿಸಿದಾಗ, ಸೆಂಟು ಎಷ್ಟೊಳ್ಳೆ ಪರಿಮಳ... ಬೇಕಾದ್ರೆ ಒಂದೊಂದು ಹನಿ ಹಾಕಿ ತೋರಿಸಲಾ! ನಿಮಗೇ ಖುಷಿಯಾಗಿ ಇನ್ನಷ್ಟು ಬಾಟಲ್ ಖರೀದಿಸ್ತೀರಿ.. ನಿಮ್ಮ ಮನಸ್ಸಿಗೆ ಬಂದಷ್ಟು ಹಣಕೊಡಿ" ಎಂಬ ಅವನ ಉತ್ತರ ಕೇಳಿದಾಗ ಮೆದುಳು ಜಾಗ್ರತವಾಗಿತ್ತು.

ಆತ ಸಿಂಪಡಿಸಬಹುದಾದ ಒಂದೊಂದು ಹನಿ ಸೆಂಟಿನಿಂದ ಏನೇನು ಅವಾಂತರ ಆಗಲಿದೆಯೋ ಎಂಬ ಭಯ ಕಾಡತೊಡಗಿತು. ಇಷ್ಟು ಹೊತ್ತು ಆತ ಮಾಡಿದ್ದೆಲ್ಲಾ ನಟನೆಯೇ ಇರಬೇಕಲ್ಲವೆ. ಅಷ್ಟಕ್ಕೂ ಸೆಂಟ್, ಪರ್‌ಫ್ಯೂಮ್ ನನಗೇನೂ ಹಿಡಿಸದು. ಬೇಡವೆಂದು ಹೇಳುತ್ತಿದ್ದರೂ. "ಬೋಣಿ ಅಮ್ಮ... ನಿಮಗೆಷ್ಟು ತೋಚುತ್ತೋ ಅಷ್ಟೇ ಕೊಡಿಸಿ ಎಂದು ಪಟ್ಟುಬಿಡದಂತೆ ಕೇಳತೊಡಗಿದವರ ಒಳಮುಖ ಅನಾವರಣಗೊಂಡಿತ್ತು. ಆ ಸೆಂಟ್ ನಮ್ಮ ಮೇಲೆ ಸಿಂಪಡಿಸಿಬಿಟ್ಟರೆ ಎಂಬ ಭಯದಿಂದ, "ಈಗೇನೂ ಬೇಡಪ್ಪ." ಎಂದು ಗಡಬಡಿಸಿ ಹೊರಟು ಬಿಟ್ಟೆವು.

"ಇಷ್ಟೆಲ್ಲಾ ವಿಚಾರಿಸಿ ಹಾಗೇ ಹೋಗ್ತಿದೀರಲ್ಲ... ನಿಮ್ಗೆ ಒಳ್ಳೆಯದಾಗೋಲ್ಲ. ಹಾರ್ಟ್‌ಪೇಶೆಂಟ್‌ಗೆ ಮೋಸ ಮಾಡ್ತೀರಾ: ಎಂದು ಜೋರಾಗಿ ಹೇಳತೊಡಗಿದರೂ, ನಾವು ಒಮ್ಮೆ ಅಲ್ಲಿಂದ ಪಾರಾದರೆ ಸಾಕು; ಬೀದಿಯಲ್ಲಿ ದೃಶ್ಯ ಸೃಷ್ಟಿಸುವುದು ಬೇಡವೆಂದುಕೊಂಡು ಅವನ ಮಾತುಗಳಿಗೇನೂ ಪ್ರತಿಕ್ರಿಯಿಸದೆ ಹೊರಟು ಬಿಟ್ಟಿದ್ದೆವು. ಆ ಘಟನೆಯ ಬಗ್ಗೆ ಚರ್ಚಿಸಿದ್ದು ಅಕ್ಕನ ಮನೆಗೆ ಹೋದ ನಂತರವೆ! ಆ ಸೆಂಟ್ ಬಾಟಲ್ ತೆರೆದಿದ್ದರೆ ಏನೆಲ್ಲಾ ಅನಾಹುತವಾಗುತ್ತಿತ್ತೋ...

ಸಭ್ಯನಂತೆ ಕಾಣುವಾತ ಅದೆಷ್ಟು ಚೆನ್ನಾಗಿ ನಟನೆ ಮಾಡಿದ್ದಾರೆ. ನಮ್ಮ ಒಳಮನಸ್ಸು ಆತ ಅಪರಿಚಿತನೆಂದು ಅನುಮಾನಿಸಿದರೂ ನಾವೇಕೆ ಅವರ ಮಾತಿಗೆ ಕಿವಿಗೊಟ್ಟು ಉತ್ತೇಜಿಸಿದೆವಲ್ಲ... ಯಾರನ್ನು ಬಲೆಗೆ ಬೀಳಿಸಬಹುದು ಎಂದು ಅವರು ಹೇಗೆ ನಿರ್ಧರಿಸುತ್ತಾರೋ... ಹೊಸ ಹೊಸ ತಂತ್ರಗಳನ್ನು ಹೇಗೆ ಹುಡುಕುತ್ತಾರೋ.. ಇಂತಹವರಿಂದಾಗಿ ಪ್ರಾಮಾಣಿಕವಾಗಿ ಕಷ್ಟ ಹೇಳಿಕೊಂಡವರನ್ನು ನಂಬದಿರುವಂತಾಗುತ್ತದೆ. ಆದಷ್ಟೂ ಜಾಗ್ರತರಾಗಿರಬೇಕು. ಎಂದು ನಮ್ಮಲ್ಲೇ ಮಾತನಾಡಿಕೊಂಡಿದ್ದೆವು.

ಅಲ್ಲಿಂದ ಮುಂದೆ ಎರಡು ದಿನಗಳು ಯಾತ್ರೆ ಮಾಡುವ ಉದ್ದೇಶದಿಂದ ನಾವು ನಾಲ್ಕು ಜನರು ಹೊರಟಿದ್ದೆವು. ನಮ್ಮೊಂದಿಗಿದ್ದ ಲಗೇಜ್‌ಗಳ ಬಗ್ಗೆಯೇ ನಮಗೆ ಹೆಚ್ಚಿನ ಚಿಂತೆಯಾಗಿತ್ತು.

ಕಮಲಶಿಲೆ, ಕೊಲ್ಲೂರು, ಹಟ್ಟಿಯಂಗಡಿ, ಮಂದರ್ತಿ ಬಗೆ ಸಾಧ್ಯವಾದಷ್ಟು ದೇವಸ್ಥಾನಗಳಿಗೆ ಹೋಗಿ ದರ್ಶನ ಪಡೆಯುವ ಹಂಬಲ ನಮ್ಮದಾಗಿತ್ತು. ಹೊಸನಗರದವರೆಗೂ ಅಕ್ಕನ ಮಗನೊಂದಿಗೆ ಅವರ ಕಾರಿನಲ್ಲೇ ಹೋಗಿ ಅಲ್ಲಿ ಬಸ್ ನಿಲ್ದಾಣದಲ್ಲೇ ಇಳಿದುಕೊಂಡೆವು. ನಾವು ಹೋಗಬೇಕಾಗಿದ್ದ ಬಸ್ ಆಗ ತಾನೆ ಹೋಗಿದ್ದರಿಂದ ನಾವು ಅಲ್ಲಿ ತುಸು ಹೊತ್ತು ಕಾಯುವುದು ಅನಿವಾರ್ಯವಾಗಿತ್ತು. ಮಳೆ ಬಂದರೆ ಬಸ್ ಬರುವ ಸಮಯ ಮತ್ತಷ್ಟು ವ್ಯತ್ಯಾಸವಾಗುತ್ತದೇನೊ. ಎಂಬ ಚಡಪಡಿಕೆಯಲ್ಲಿ ಬಸ್ ಬರುವತ್ತ ದೃಷ್ಟಿ ಹಾಯಿಸುತ್ತಿದ್ದೆವು.

ಇರುವ ಒಂದು ಸರ್ಕಾರೀ ಬಸ್ 'ಉಚಿತ' ಸೌಲಭ್ಯ ಪ್ರಾರಂಭವಾದಾಗಿನಿಂದ ಸಮಯಕ್ಕೆ ಸರಿಯಾಗಿ ಬರುವುದೇ ಇಲ್ಲವಂತೆ. ಆ ಬಸ್ ಬಂದರೂ ನಾವು ನಾಲ್ಕು ಮಂದಿ ಲಗೇಜ್‌ಗಳನ್ನಿಟ್ಟುಕೊಂಡು ಕುಳಿತುಕೊಳ್ಳುವುದು ಕಷ್ಟವೇ ಎನಿಸುತ್ತಿತ್ತು.

ಆ ನಿಲ್ದಾಣದಲ್ಲಿ ಕುಳಿತುಕೊಳ್ಳಲು ಸಾಕಷ್ಟು ಬೆಂಚುಗಳ ವ್ಯವಸ್ಥೆಯಿದ್ದು, ಸ್ವಚ್ಛವಾಗಿಯೂ ಇದ್ದುದರಿಂದ ಲಗೇಜನ್ನು ಗಮನಿಸುತ್ತಾ, ಬಸ್ ಕಾಯುತ್ತಾ ಕುಳಿತುಕೊಂಡಿದ್ದೆವು. ಕತ್ತಲಾಗುವ ಮೊದಲು ಕಮಲಶಿಲೆಯನ್ನು ಸೇರಿಕೊಳ್ಳುವ ಧಾವಂತ ನಮ್ಮದಾಗಿತ್ತು. ಎರಡು ಗಂಟೆಗಳಷ್ಟು ಬಸ್ ಪ್ರಯಾಣ ಮಾಡಿ ಮತ್ತೆ ಟ್ಯಾಕ್ಸಿಯಲ್ಲಿ ಹೋಗಬೇಕಿತ್ತು. ನಮಗಂತೂ ಅದು ಅಪರಿಚಿತ ಸ್ಥಳವಾಗಿತ್ತು.

ಅಷ್ಟರಲ್ಲೇ ನಾವು ಕುಳಿತುಕೊಂಡಿದ್ದ ಬೆಂಚಿನ ತುದಿಯಲ್ಲಿ ಮುದ್ದು ಮಗುವನ್ನು ಎತ್ತಿಕೊಂಡಿದ್ದ ಯುವಕನೊಬ್ಬ ಬಂದು ಕುಳಿತುಕೊಂಡಿದ್ದ. ಮಗು ಅಳುವುದು, ಒಮ್ಮೊಮ್ಮೆ ಕೈಯಲ್ಲಿದ್ದ ಚಾಕ್ಲೆಟ್ ಚೀಪುವುದು ಮಾಡುತ್ತಿತ್ತು. ನಿದ್ದೆಗೋ, ಅತ್ತಿದ್ದರಿಂದಲೋ ಕಂದನ ಕಣ್ಣುಗಳೂ ಊದಿಕೊಂಡಂತಿದ್ದವು. ನಮ್ಮೆಲ್ಲರ ದೃಷ್ಟಿಯೂ ಮಗುವಿನತ್ತಲೇ ಹರಿದಿತ್ತು.

"ನೋಡಿ...ಏನು ಮಾಡಿದ್ರೂ ಅಳ್ತಾನೇ ಇದ್ದಾಳೆ. ಅಮ್ಮ ಬೇಕು ಅಂತ ಪೀಡಿಸ್ತಾ ಇದ್ದಾಳೆ. ಬಸ್ ಬಂದು ನಾವಿನ್ನೂ ಮನೆ ಸೇರಿಕೊಳ್ಳಬೇಕಲ್ಲ... ಒಂದುಗಂಟೆಯಾದರೂ ಬೇಕು. ವಾಶ್‌ರೂಮಿಗೆ ಹೋಗೋಕೂ ಬಿಡ್ತಾಇಲ್ಲ. ದಯವಿಟ್ಟು ಸ್ವಲ್ಪ ಇವಳನ್ನು ನೋಡಿಕೊಳ್ತೀರಾ," ಎಂದು ಹೇಳಿದವನೇ 'ಅಜ್ಜಿ ಹತ್ತಿರ ಇರು... ಈಗ ಬಂದುಬಿಡ್ತೀನಿ.' ಎಂದು ಅಲ್ಲಿ ಮಗುವನ್ನು ನಮ್ಮ ಹತ್ತಿರ ಬಿಟ್ಟು ಹೊರಡಲನುವಾಗಿದ್ದ. ನಮಗೋ ಪೇಚಿಗಿಟ್ಟುಕೊಂಡಿತ್ತು. ಹೋಗುತ್ತಿದ್ದವರನ್ನು ಕೂಗಿ ಕರೆಯುತ್ತಾ,' ಇಲ್ಲಪ್ಪ ನಮ್ಮ ಬಸ್ ಬಂದ್ರೆ ನಾವು ಹೋಗ್ತಿದ್ದೀವಿ. ಈಗಲೇ ತಡವಾಗಿದೆ. ಕಾಯೋಕಾಗಲಪ್ಪ... ಎಂದು ತುಸು ಗಡುಸಾಗಿಯೇ ನುಡಿದಿದ್ದೆವು.

'ಇಷ್ಟೂ ಸಹಾಯ ಮಾಡೋಕಾಗೊಲ್ಲವಾ ಏನು ಜನನೋ.' ಎಂದು ಗೊಣಗಿಕೊಂಡು ಮಗುವನ್ನು ಅಲ್ಲಿಯೇ ಪಕ್ಕದಲ್ಲಿ ಇದನ್ನೆಲ್ಲಾ ನೋಡುತ್ತಿದ್ದಾತನ ಕೈಗೆ ಕೊಟ್ಟಿದ್ದ. ಆತನಿಗೆ ಇವನದೇ ಹೋಲಿಕೆಯಿದ್ದುದು ನಮಗೆ ಮತ್ತಷ್ಟು ಅಚ್ಚರಿ. ಹಾಗೂ ಅನುಮಾನಕ್ಕೆಡೆ ಮಾಡಿತ್ತು.

ಒಂದೆರಡು ಗಂಟೆಗಳ ಕೆಳಗೆ ಮೋಸ ಹೋಗುವುದರಲ್ಲಿದ್ದ ನಾವೀಗ ಪಾಠ ಕಲಿತಿದ್ದೆವು. ಆ ಮಗುವಿನ ಅಮ್ಮನನ್ನು ಬಿಟ್ಟು ಮಗುವನ್ನು ಹೀಗೆ ಕರೆದುಕೊಂಡು ಬರಲು ಕಾರಣವಾದರೂ ಏನು?. ಮಗು ಅಳುತ್ತಲೇ ಇತ್ತಲ್ಲ. ಮಗು ಅವನದೋ ಅಥವಾ... ಮನಸ್ಸು ಎತ್ತತ್ತಲೋ ಸಾಗುತ್ತಿತ್ತು.

ಅಷ್ಟರಲ್ಲಿ ನಾವು ಹೋಗಬೇಕಾದ ಬಸ್ ಬಂದಿದ್ದರಿಂದ ಹತ್ತಿಕೊಂಡೆವು. ಆದರೆ ಆಗಲೂ, ಈಗಲೂ ಮಗುವಿನ ಮುಖ ಕಣ್ಣಿಗೆ ಕಟ್ಟಿದಂತಿದೆ. ಅಥವಾ ನಮ್ಮ ಊಹೆಯೇ ತಪ್ಪೆ? ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎನ್ನುವಂತೆ ಸರಿಯಾದ ದಾಖಲೆಗಳಿಲ್ಲದೆ ಅವರದು ತಪ್ಪು ಎನ್ನಲಾದೀತೇ? ಕುತೂಹಲವಾಗಿ ಪರೀಕ್ಷಿಸುವಷ್ಟು ವ್ಯವಧಾನ ನಮಗಿದ್ದೀತೆ? ಆದರೂ ಮಗುವಿನ ವಿಷಯದಲ್ಲಿ ಹೀಗೆ ಮೌನವಹಿಸಿದ್ದು ಸರಿಯೇ ಎಂದು ಈಗಲೂ ಮನಸ್ಸು ಕೊರಗುತ್ತಿದೆ.

ಮಕ್ಕಳ ಕಳ್ಳರ ಬೃಹತ್ ಜಾಲವೇ ಅವರದಿದ್ದೀತೆ? ಅಥವಾ ಎಲ್ಲಾ ನಮ್ಮ ಭ್ರಮೆಯೇ? ಎಂದಾದರೂ ಸತ್ಯದ ಅರಿವಾದೀತೆ? ಮಗುವಿಗೇನೂ ಅಪಾಯವಾಗದಿರಲಿ ಆ ವ್ಯಕ್ತಿ ಮಗುವಿನ ತಂದೆಯೇ ಆಗಿರಲಿ ಎಂದು ಮನಸಾ ಹಾರೈಸಿದ್ದೆವು. ಬೇಡ ಬೇಡವೆಂದರೂ ಅಂಗಾಂಶ ಮಾರಾಟದ ಗ್ಯಾಂಗಿನ ಬಗ್ಗೆ ಪತ್ರಿಕಾವರದಿ ನೋಡುತ್ತಿದ್ದಂತೆ ಅಳುತ್ತಿದ್ದ ಆ ಮುಗ್ಧ ಕಂದ ಕಣ್ಣೆದುರು ಬಂದಿದ್ದಳು.

■

## ಭಗೀರಥ ತಪಸ್ಸು

"ಯಾವುದೇ ಒಂದು ವಿಶಿಷ್ಟ ವರ್ಗದ ಅಥವಾ ಕೋಮಿನ ಸೇವೆಯನ್ನಲ್ಲ, ಆದರೆ ಇಡೀ ರಾಷ್ಟ್ರದ ಸೇವೆಯ ವ್ರತವನ್ನು ನಾವು ಸ್ವೀಕರಿಸಿದ್ದೇವೆ. ನಮ್ಮೆಲ್ಲ ಬಂಧುಗಳಿಗೂ ಭಾರತಮಾತೆಯ ಸುಪುತ್ರರಾಗುವ ನೈಜ ಗೌರವವನ್ನು ದೊರಕಿಸಿಕೊಡುವ ವರೆಗೆ ನಾವು ಸುಮ್ಮನೆ ಕೊಡುವುದಿಲ್ಲ. ನಾವು ಭಾರತಮಾತೆಯನ್ನು ನಿಜವಾದ ಅರ್ಥದಲ್ಲಿ ಸುಜಲಾ ಸುಫಲಾ ಮಾಡಿಯೇ ತೀರುತ್ತೇವೆ. ಆಕೆ ದುರ್ಗಿಯಾಗಿ ಅಸುರರ ಸಂಹಾರ ಮಾಡುವಳು, ಲಕ್ಷ್ಮಿಯಾಗಿ ಜನಕೋಟಿಗೆ ಸಮೃದ್ಧಿ ನೀಡುವಳು.

ಸರಸ್ವತಿಯಾಗಿ ಅಜ್ಞಾನದ ಅಂಧಕಾರವನ್ನು ದೂರಗೊಳಿಸಿ ಜ್ಞಾನದ ಬೆಳಕು ಬೀರುವಳು. ಹಿಂದು ಮಹಾಸಾಗರ ಹಾಗೂ ಹಿಮಾಲಯದಿಂದ ಸುತ್ತುವರಿಯಲ್ಪಟ್ಟ ಭರತಖಂಡದಲ್ಲಿ ಏಕರಸತೆ, ಕರ್ಮಠತೆ, ಸಮಾನತೆ, ಸಂಪನ್ನತೆ, ಜ್ಞಾನ, ಸುಖ ಮತ್ತು ಶಾಂತಿಯ ಸಪ್ತಜಾಹ್ನವಿಯ ಪುಣ್ಯಪ್ರವಾಹವನ್ನು ಎಲ್ಲಿಯ ವರೆಗೆ ಹರಿಸುವುದಿಲ್ಲವೋ ಅಲ್ಲಿಯ ವರೆಗೆ ನಮ್ಮ ಈ ಭಗೀರಥ ತಪಸ್ಸು ಕೊನೆಗೊಳ್ಳುವುದಿಲ್ಲ. ಅಂತಿಮ ವಿಜಯದಲ್ಲಿ ಅಚಲ ಶ್ರದ್ಧೆ ಇಟ್ಟು, ಸಮರ್ಪಿತಭಾವದಿಂದ ನಾವು ಕರ್ತವ್ಯದ ಹಾದಿಯಲ್ಲಿ ಮುನ್ನಡೆಯೋಣ."

– ಪಂ. ದೀನದಯಾಳಜಿ

## ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿ

# ಅಂಚೆ ಮೂಲಕ ಸಂಸ್ಕೃತ ಕಲಿಯಿರಿ

ಅಖಿಲಭಾರತ ಸೇವಾ ಶಿಕ್ಷಣ ಸಂಸ್ಥೆಯಾದ ಸಂಸ್ಕೃತ ಭಾರತೀಯು ಆಸಕ್ತರಿಗಾಗಿ ಅಂಚೆ ತೆರಪಿನ ಸಂಸ್ಕೃತ ಶಿಕ್ಷಣ ಯೋಜನೆಯನ್ನು ರೂಪಿಸಿದೆ. ತಾವಿರುವ ಸ್ಥಾನದಲ್ಲಿಯೇ ಸಂಸ್ಕೃತ ಕಲಿಯಲು ಅನುಕೂಲವಾಗುವ ಯೋಜನೆ ಇದು. ಯಾವುದೇ ಜಾತಿ, ಮತ, ಭಾಷೆಯ ಬೇಧವಿಲ್ಲದೇ ಈ ಯೋಜನೆಯ ಅಡಿಯಲ್ಲಿ 5 ಲಕ್ಷ ಜನರು ಸಂಸ್ಕೃತವನ್ನು ಕಲಿತಿದ್ದಾರೆ. ಕಲಿಕೆಯಲ್ಲಿ ಆಸಕ್ತಿ ಇರುವ ಎಲ್ಲ ಸಮಾಜ ಬಾಂಧವರು ಈ ಯೋಜನೆಯ ಅಡಿಯಲ್ಲಿ ಸಂಸ್ಕೃತವನ್ನು ಕಲಿಯಬಹುದಾಗಿದೆ.

ಪ್ರವೇಶ, ಪರಿಚಯ, ಶಿಕ್ಷಾ, ಕೋವಿದ ಎನ್ನುವ ನಾಲ್ಕು ಹಂತಗಳ ಕಲಿಕೆಯ ಮೂಲಕ ಉತ್ತಮ ಸಂಸ್ಕೃತ ಜ್ಞಾನವನ್ನು ಪಡೆಯಬಹುದು. 16 ವರ್ಷ ಮೇಲ್ಪಟ್ಟವರು ಮಾತ್ರ ಈ ಯೋಜನೆಯಲ್ಲಿ ಕಲಿಯಲು ಅರ್ಹರು. ಕಲಿಕೆಗೆ ಸಂಸ್ಕೃತ ಭಾಷೆಯ ಪೂರ್ವ ಜ್ಞಾನದ ಅವಶ್ಯಕತೆ ಇಲ್ಲ. ಪ್ರತೀ ವರ್ಷ ಫೆಬ್ರುವರಿ ಮತ್ತು ಅಗಸ್ಟ ತಿಂಗಳಿನಲ್ಲಿ ಪರೀಕ್ಷೆಗಳು ನಡೆಯುತ್ತವೆ. ಪ್ರತೀ ಹಂತದ ಕಲಿಕೆಯಲ್ಲಿ ಉತ್ತೀರ್ಣರಾದವರಿಗೆ ಸಂಸ್ಕೃತಭಾರತಿಯು ಪ್ರಮಾಣ ಪತ್ರವನ್ನು ನೀಡುತ್ತದೆ. ಸುಭಾಷಿತ, ಭಾಷೆ ಕಲಿಕೆ, ಶಬ್ದರೂಪ, ಶ್ಲೋಕ, ಕಥೆ, ವ್ಯಾಕರಣ ಮುಂತಾದ ಹತ್ತಾರು ವಿಷಯಗಳ ತುಂಬಾ ಸರಳವಾದ ಪಾಠ್ಯಕ್ರಮ ಇದು. ವಾರದಲ್ಲಿ ಒಂದು ಬಾರಿ ನಿ:ಶುಲ್ಕ Online ತರಗತಿಗಳು ನಡೆಯುತ್ತವೆ. ಕನ್ನಡ, ಇಂಗ್ಲೀಷ್, ಹಿಂದಿ, ಮಲೆಯಾಳಂ, ಮರಾಠಿ, ತೆಲಗು, ತಮಿಳು, ಗುಜರಾತಿ, ಬಂಗಾಳಿ ಭಾಷಾ ಮಾಧ್ಯಮದ ಮೂಲಕ ಸಂಸ್ಕೃತ ಕಲಿಕೆಗೆ ಅವಕಾಶವಿದೆ.

ಸಂಸ್ಕೃತ ಕಲಿಯಲು ಆಸಕ್ತರು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ. ಸಂಸ್ಕೃತಭಾರತಿ ಅಂತರ್ಜಾಲ ಪುಟ https://www.samskritabharati.in

## ಸಂಸ್ಕೃತ ಭಾರತಿ

'ಅಕ್ಷರಂ' 8ನೇ ಅಡ್ಡರಸ್ತೆ, 2ನೇ ಹಂತ, ಗಿರಿನಗರ ಬೆಂಗಳೂರು 560085
ದೂರವಾಣಿ: 080-26721052/26722576,
ಇ-ಮೇಲ್: samskritam@gmail.com

# ಜೆಹಾದಿ ಸವಾಲು – ಸಮಾಜ ಸುರಕ್ಷೆಗೆ ಪರಿಷದ್ ಪಾಲು













































Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-07-2024


ಯೋಗ ದಿನ, ಭದ್ರಾವತಿ


ಯೋಗ ದಿನ, ಸಾಗರ







ವ್ಯಕ್ತಿತ್ವ ವಿಕಸನ, ಮಡಿವಾಳ, ಜಯನಗರ ಜಿಲ್ಲೆ


ಬನಶಂಕರಿ ಜಿಲ್ಲೆ – ದತ್ತ ಪೀಠ ಯಾತ್ರೆ


ವಿಶೇಷ ಸತ್ಸಂಗ, ಸಾಗರ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy